ಖಾಸಗಿ ಪ್ರಸಾರ




# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ



ಮಾಸಪತ್ರಿಕೆ
ಸಂಪುಟ 2, ಸಂಚಿಕೆ 8, ಜೂನ್ 2024
SHRIDEVI ANTARANGA
Monthly Magazine

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್




## ಹೋರಾಟಗಾರರೊಬ್ಬರಿಗೆ ರಾಷ್ಟ್ರೀಯ ಮಾನ್ಯತೆ



ಸಂಪಾದಕರ ಅಂತರಂಗ

**ಡಾ. ಎಂ.ಆರ್. ಹುಲಿನಾಯ್ಕರ್**
**ಸಂಸ್ಥಾಪಕ ಅಧ್ಯಕ್ಷರು**
**ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ**

### ಅಭಿವೃದ್ಧಿಪರ ರಾಜಕಾರಣಿ

ದೇಶದಲ್ಲಿ 18ನೆಯ ಲೊಕಸಭಾ ಚುನಾವಣೆಗಳು ಪೂರ್ಣಗೊಂಡಿದೆ. ಜೂನ್ 4ರಂದು ಫಲಿತಾಂಶ ಸಹ ಪ್ರಕಟವಾಗಿದೆ. ಪ್ರಧಾನಿ ಸನ್ಮಾನ್ಯ ಶ್ರೀ ನರೇಂದ್ರಮೋದಿ ನೇತೃತ್ವದಲ್ಲಿ ಎನ್.ಡಿ.ಎ. ಸರ್ಕಾರ ಬಹುಮತ ಪಡೆದಿದೆ. ಸಂತೋಷದ ಸಂಗತಿಯೆಂದರೆ ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಬಲಿಷ್ಠ ವಿರೋಧಪಕ್ಷಗಳಿರಲಿಲ್ಲ. ಈ ಇಂಡಿಯಾ ಒಕ್ಕೂಟ 234 ಸ್ಥಾನಗಳನ್ನು ಗಳಿಸುವುದರ ಮೂಲಕ ಆ ಕೊರತೆಯನ್ನು ನೀಗಿಸಿದೆ.

ತುಮಕೂರು ಲೋಕಸಭಾ ಕ್ಷೇತ್ರದಿಂದ ರಾಜ್ಯದ ಹಿರಿಯ ರಾಜಕಾರಣಿ, ಸಂಘಟನಾಚತುರರು ಮತ್ತು ಅಭಿವೃದ್ಧಿಶೀಲ ರಾಜಕೀಯ ಮುತ್ಸದ್ದಿ ಎಂದು ಖ್ಯಾತರಾಗಿರುವ ಮಾನ್ಯ ವಿ.ಸೋಮಣ್ಣ ಅವರು ಭಾರತೀಯಜನತಾಪಕ್ಷದ ಅಭ್ಯರ್ಥಿಯಾಗಿ ತಮ್ಮ ಪ್ರತಿಸ್ಪರ್ಧಿಗಿಂತ 1.72ಲಕ್ಷ ಮತಗಳಿಂತ ಹೆಚ್ಚು ಮತಪಡೆದು ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಜೊತೆಗೆ ಕೇಂದ್ರ ಸಚಿವರೂ ಆಗಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ವೈಯಕ್ತಿಕ ಮತ್ತು 'ಶ್ರೀದೇವಿ ಅಂತರಂಗ' ಪತ್ರಿಕೆಯ ಪರವಾಗಿ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಈ ಸಂದರ್ಭದಲ್ಲಿ ಮಾನ್ಯ ವಿ.ಸೋಮಣ್ಣ ಅವರ ಬದುಕಿನ ಸ್ಥೂಲ ವಿವರಗಳನ್ನು ಒದಗಿಸಬಯಸುತ್ತೇನೆ. ಅದಕ್ಕೆ ಮೊದಲು ವಿ.ಸೋಮಣ್ಣ ಮನೋಧರ್ಮವನ್ನು ತಿಳಿಯಲು ಡಾ.ಬಿ.ಆರ್. ಅಂಬೇಡ್ಕರ್ ಅವರು 'ಹಿಂದೂಧರ್ಮದ ಒಗಟುಗಳು' ಗ್ರಂಥದಲ್ಲಿ ಹೇಳಿರುವ ಮಾತುಗಳ ಮೂಲಕ ಪರಿಚಯಿಸುತ್ತೇನೆ.

▸▸ 3ನೇ ಪುಟಕ್ಕೆ...

## ಫಿಜಿಯೋಥೆರಪಿ ಭವಿಷ್ಯದ ವೈದ್ಯಕೀಯಕ್ಷೇತ್ರದ ಮುಖ್ಯ ಅಧ್ಯಯನ ವಿಷಯ: ಪಿ.ಜಿ.ಆರ್. ಸಿಂಧ್ಯ

"ಆಧುನಿಕ ವೈದ್ಯಕೀಯ ವಿಜ್ಞಾನದಲ್ಲಿ ಫಿಜಿಯೋಥೆರಪಿಗೆ ಅತ್ಯಂತ ಮಹತ್ವವಿದೆ. ಫಿಜಿಯೋಥೆರಪಿ ಮಾನವನ ಶರೀರಕ ವೇದನೆಗಳನ್ನು ನಿವಾರಣೆ ಮಾಡುತ್ತವೆ. ಶಾರೀರಕವಾಗಿ ಮನುಷ್ಯ ಸದಾ ಫಿಟ್‌ನೆಸ್ ಹೊಂದಿರಬೇಕು ಎನ್ನುವುದು ಆರೋಗ್ಯದ ಮೂಲ ಪಾಠ. ಈ ಜ್ಞಾನವನ್ನು ವಿದ್ಯಾರ್ಥಿಗಳು ಕಷ್ಟಪಟ್ಟುಗಳಿಸಿಕೊಳ್ಳಬೇಕು.

'ಫಿಸಿಯೋಥೆರಪಿ ಭಾರತದಲ್ಲಿ ತನ್ನದೇ ಆದ ಮಹತ್ವ ಪಡೆದಿತ್ತು. ಚರಕ, ಸುಶ್ರುತ ಮೊದಲಾದ ಭಾರತೀಯ ವೈದ್ಯಕೀಯ ಪರಂಪರೆಯ ಮಹಾನ್ ವ್ಯಕ್ತಿಗಳು ಮನುಷ್ಯ ತನ್ನ ಶರೀರವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ತಿಳಿಸಿದ್ದರು. ಭಾರತೀಯರಲ್ಲಿ ರೋಗಬಾರದಂತೆ ನೋಡಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ಕೊಡಲಾಗಿದೆ. ಯೋಗಶಾಸ್ತ್ರವೊಂದು ವೈಜ್ಞಾನಿಕ ತಳಹದಿಯ ಅವಲಂಬಿತ ಅಧ್ಯಯನ ವಿಷಯ. ಫಿಜಿಯೋಥೆರಪಿಯಲ್ಲಿ ಯೋಗವನ್ನು ಸಮರ್ಥವಾಗಿ ಬೆರಸಿ ಫಿಜಿಯೋಥೆರಪಿ ಕ್ಷೇತ್ರದಲ್ಲಿ ಹೊಸಚಿಕಿತ್ಸಾ ವಿಧಾನವನ್ನು ಕಂಡು ಹಿಡಿದಿರುವ ಡಾ.ಎನ್. ನಾರಾಯಣಪ್ಪ ಅವರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. 86 ವರ್ಷದ ಡಾ.ಎನ್.ನಾರಾಯಣಪ್ಪ ಅವರು ಯೋಗ ಮತ್ತು ಫಿಜಿಯೋಥೆರಪಿಯಿಂದಾಗಿ ಇಂತಹ ಆರೋಗ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ ಎನಿಸುತ್ತದೆ, ನನಗೆ. ಅವರು ಫಿಜಿಯೋಥೆರಪಿ ಕ್ಷೇತ್ರದ ಭೀಷ್ಮರು. ಅವರಿಂದಾಗಿ ಭವಿಷ್ಯದ ಫಿಜಿಯೋಥೆರಪಿಸ್ಟ್‌ಗಳು ಪ್ರೇರಣೆ ಪಡೆಯಬೇಕು. ಅವರು ತಮ್ಮ ಮಗಳು ದಿವಂಗತ ಎನ್.ಸುಧಾ ಅವರ ಹೆಸರಿನಲ್ಲಿ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಸ್ಥಾಪಿಸಿರುವುದು ನನಗೆ ಸಂತೋಷ ತಂದಿದೆ. ಅದರಿಂದಾಗಿ ಕುಮಾರಿ ಸುಧಾ ಚಿರಂಜೀವಿಯಾಗಿ ಮಕ್ಕಳ ಮಧ್ಯೆ ಉಳಿಯುತ್ತಾರೆ.



**ಜೂನ್ 1ರಂದು ಮಾಜಿ ಸಚಿವರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುಖ್ಯ ಆಯುಕ್ತರಾದ ಪಿ.ಜಿ.ಆರ್.ಸಿಂಧ್ಯ ಅವರು ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಫಿಜಿಯೋಥೆರಪಿಸ್ಟ್ ಡಾ.ಎನ್.ನಾರಾಯಣಪ್ಪ ಮತ್ತು ದಿವಂಗತ ಕುಮಾರಿ ಎನ್.ಸುಧಾ ಅವರ ಹೆಸರಿನ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.**

'ಸಮಾಜ ನಮಗೆ ಎಲ್ಲಾ ನೀಡಿದೆ. ಅದನ್ನು ನಾವು ಸಮಾಜಕ್ಕೆ ಹಿಂದಿರುಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅದನ್ನು ಡಾ.ಎನ್.ನಾರಾಯಣಪ್ಪ ದಂಪತಿಗಳು ಮಾಡಿದ್ದಾರೆ. ಅವರಿಗೆ ಎಲ್ಲರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

"ನನಗೆ ಡಾ.ಎಂ.ಆರ್.ಹುಲಿನಾಯ್ಕರ್ ಅವರು ನನಗೆ ಬಹಳ ದಿನಗಳಿಂದಲೂ ಮಿತ್ರರು. ರಾಜಕೀಯದಲ್ಲಿ ಒಂದೇ ಪಕ್ಷದಲ್ಲಿದ್ದವರು. ಅವರಿಗೆ ರಾಜಕಾರಣ ಹೆಚ್ಚಿಗೆ ಕೊಟ್ಟಿಲ್ಲ. ಅವರು ಸಮಾಜಕ್ಕೆ ಮಹತ್ವದ ಕೊಡುಗೆ ಕೊಟ್ಟಿದ್ದಾರೆ. ಶ್ರೀದೇವಿ ವೈದ್ಯಕೀಯ ಕಾಲೇಜು ಕುರುಬ ಸಮಾಜದ ಮೊದಲ ವೈದ್ಯಕೀಯ ಕಾಲೇಜು ಎನ್ನುವುದು ತಿಳಿದು ತುಂಬಾ ಸಂತೋಷ ಮತ್ತು ಹೆಮ್ಮೆಯಾಗಿದೆ. ಡಾ.ಹುಲಿನಾಯ್ಕರ್ ಅವರ ಆತ್ಮಕಥನ 'ಅಂತರಂಗದ ಅವಲೋಕನ' ಗ್ರಂಥವನ್ನು ನೀವೆಲ್ಲಾ ಓದಲೇಬೇಕು. ಆ ಗ್ರಂಥ ನಮ್ಮನ್ನು ವಿಶಿಷ್ಟ ಲೋಕಕ್ಕೆ ತೆಗೆದುಕೊಂಡು ಹೋಗುತ್ತದೆ. ಅವರ ಬದುಕು ಅನೇಕರಿಗೆ ಪ್ರೇರಣೆ ನೀಡುವುದರಲ್ಲಿ ಸಂಶಯವಿಲ್ಲ. ಇಂತಹ ಗ್ರಂಥವನ್ನು ಕನ್ನಡ ಸಾಹಿತ್ಯಲೋಕಕ್ಕೆ ಕೊಡುಗೆ ಕೊಟ್ಟಿರುವ ಡಾ.ಕೆ.ಆರ್. ಕಮಲೇಶ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

'ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣದವರೆಗೆ ವಿದ್ಯರ್ಥಿಗಳಿಗೆ ಅವಕಾಶವಿರುವುದು ಸಂತಸದ ವಿಚಾರ. ಇದು ಬೇಗ ವಿಶ್ವವಿದ್ಯಾನಿಲಯವಾಗಬೇಕು. ಅದಕ್ಕೆ ನನ್ನಿಂದ ಆಗುವ ಎಲ್ಲಾ ಸಹಕಾರವನ್ನು ನೀಡಲು ಸಿದ್ಧನಿದ್ದೇನೆ".



**ಪಾವಗಡ ಶಾರದಾದೇವಿ ಕಣ್ಣಿನ ಆಸ್ಪತ್ರೆ ಹಾಗೂ ಸ್ವಾಮಿ ವಿವೇಕಾನಂದ ಗ್ರಾಮಾಂತರ ಆರೋಗ್ಯ, ನಿಯೋನಿಕ್ ಐ ಕೇರ್ ಟ್ರಸ್ಟ್ ಮತ್ತು ಶ್ರೀದೇವಿ ಮೆಡಿಕಲ್ ಕಾಲೇಜು ಇವರ ಜಂಟಿ ಸಹಯೋಗದಲ್ಲಿ ಅಂಧ ಮಕ್ಕಳ ಬಾಳಿನಲ್ಲಿ ಹೊಸ ಭರವಸೆ ಮೂಡಿಸಲು ಅನುಷ್ಠಾನ ಮಾಡುತ್ತಿರುವ 'ವಿವೇಕ ಕಿರಣ' ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿಗಳಿಗೆ ಸನ್ಮಾನ.**

## ತೃಪ್ತಿ ಹಾಗು ಮಾನವೀಯತೆ ಜೀವನಕ್ಕೆ ಬೇಕಾದ ಎರಡು ಮೌಲ್ಯ: ನ್ಯಾ.ಸಂತೋಷ ಹೆಗಡೆ

"ತೃಪ್ತಿ ಮತ್ತು ಮಾನವೀಯತೆ ಎನ್ನುವ ಮೌಲ್ಯಗಳನ್ನು ಮನುಷ್ಯರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಜೀವನ ನಿರ್ವಹಣೆಗೆ ಹಣ ಸಂಪಾದನೆ ಅನಿವಾರ್ಯ. ಅದನ್ನು ಕಷ್ಟಪಟ್ಟು ಕಲಿತ ವಿದ್ಯೆಯಿಂದ ಸಂಪಾದಿಸಬೇಕೆ ಹೊರತು ಇನ್ನೊಬ್ಬರ ಜೇಬಿನಿಂದ ಕಸಿಯಬಾರದು. ಇಂದು ಮನುಷ್ಯ ದುರಾಸೆಗೆ ಬಿದ್ದು ಶ್ರೀಮಂತನಾಗಲು ಹವಣಿಸುತ್ತಿದ್ದಾನೆ.

▸▸ 7ನೇ ಪುಟಕ್ಕೆ...

## ಶ್ರೀದೇವಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಗೆ 'ಮಿಸ್ ವರ್ಲ್ಡ್' ಪುರಸ್ಕಾರ



ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ 3ನೆಯ ವರ್ಷದ ಚರ್ಮರೋಗಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗಾಗಿ ಅಧ್ಯಯನ ಮಾಡುತ್ತಿರುವ ಕು.ಶೃತಿ ಹೆಗಡೆ ಅವರಿಗೆ ಫ್ರಾನ್ಸ್‌ನ ಫ್ಲೋರಿಡ್‌ದಲ್ಲಿ ಜರುಗಿದ ಮಿಸ್ ವರ್ಲ್ಡ್ ಸ್ಪರ್ಧೆಯಲ್ಲಿ Miss Universe Petite ಪ್ರಶಸ್ತಿ ದೊರಕಿದೆ. 13ವರ್ಷಗಳ ನಂತರ ಭಾರತಕ್ಕೆ ಈ ಪ್ರಶಸ್ತಿ ದೊರಕಿರುವುದು ಸ್ವಾಗತಾರ್ಹ ವಿಚಾರವಾಗಿದೆ. ಕು.ಶೃತಿ ಹೆಗಡೆ ಅವರನ್ನು ಶ್ರೀದೇವಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಮತ್ತು ಬೋಧನಾವರ್ಗದವರು ಅಭಿನಂದಿಸಿದ್ದಾರೆ.

## ಅಂತಾರಾಷ್ಟ್ರೀಯ ತಂಬಾಕು ನಿಷೇಧ ದಿನಾಚರಣೆ

ಅಂತಾರಾಷ್ಟ್ರೀಯ ತಂಬಾಕು ನಿಷೇಧ ದಿನಾಚರಣೆಯ ಮುಖ್ಯ ಉದೇಶ ಯುವಜನಾಂಗವನ್ನು ತಂಬಾಕು ಸೇವನೆಯಿಂದ ದೂರವಿಡುವುದು ಆಗಿದೆ. ಪ್ರಸ್ತುತ ಮಕ್ಕಳು ಮತ್ತು ಯುವಕರು ಈ ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ತಂಬಾಕುಸೇವನೆಯ ಈ ಕೆಟ್ಟಚಟಕ್ಕೆ 37 ದಶಲಕ್ಷ ಯುವಕ\ ಯುವತಿಯರು ಬಲಿಯಾಗುತ್ತಿದ್ದಾರೆ. ತಂಬಾಕುಸೇವನೆಯಿಂದಾಗಿ ಅವರ ಭವಿಷ್ಯವು ಕರಾಳವಾಗಿರುತ್ತದೆ. ಈ ತಂಬಾಕುಸೇವನೆಯಿಂದ ಅವರನ್ನು ದೂರ ಕರೆದುಕೊಂಡು ಬರದಿದ್ದರೆ ನಾಗರಿಕ ಸಮಾಜಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ.

ಇದರ ಅಂಗವಾಗಿ ಬೆಳ್ಳಾವಿಯ ಪ್ರಾಥಮಿಕ ಆರೋಗ್ಯಕೇಂದ್ರದಲ್ಲಿ ಶ್ರೀದೇವಿ ನರ್ಸಿಂಗ್ ಕಾಲೇಜು, ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜು ಮತ್ತು ಶ್ರೀದುರ್ಗಾಂಬಿಕ ಕಾಲೇಜಿನ ಸಹಯೋಗದಲ್ಲಿ 31.5.2024 ರಂದು 'ತಂಬಾಕು ನಿಷೇಧ ದಿನ'ವನ್ನು ಆಚರಣೆ ಮಾಡಲಾಯಿತು.

ಬಿ.ಎಸ್‌ಸಿ. ನರ್ಸಿಂಗ್‌ನ ನಾಲ್ಕನೆಯ ವರ್ಷದ 250 ವಿದ್ಯಾರ್ಥಿಗಳು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಬೆಳ್ಳಾವಿ ಪ್ರಾಥಮಿಕ ಆರೋಗ್ಯ ಕ್ಷೇಂದ್ರದಿಂದ ಪ್ರಾರಂಭ ಮಾಡಿ ವಿವಿಧ ರಸ್ತೆಗಳಲ್ಲಿ ಜಾಥಾ ಮಾಡಿದರು. ತಂಬಾಕು ಸೇವನೆಯಿಂದ ವ್ಯಕ್ತಿಗೆ ಕ್ಯಾನ್ಸರ್, ಹೃದಯಾಘಾತ, ಆಸ್ತಮಾ ಮೊದಲಾದ ರೋಗಗಳು ಬರಬಹುದು ಎಂಬುದನ್ನು ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಚೆನ್ನಾಗಿ ಮನದಟ್ಟು ಮಾಡಿಕೊಟ್ಟರು.

ಕಮ್ಯುನಿಟಿ ಮೆಡಿಸಿನ್ ವಿಭಾಗದ ಪ್ರಾಧ್ಯಾಪಕರಾದ ಡಾ.ರವೀಶ್ ಕಾರ್ಯಕ್ರಮದ ಸಂಘಟನೆ ಮಾಡಿದ್ದರು. ಬೆಳ್ಳಾವಿ ಆರೋಗ್ಯ ಕೇಂದ್ರದ ಆರೋಗ್ಯ ಅಧಿಕಾರಿ ಡಾ.ರಾಧಾಕೃಷ್ಣ ಅವರು ಮಾತನಾಡುತ್ತಾ 'ಒಮ್ಮೆ ತಂಬಾಕರು ಚಟಕ್ಕೆ ಬಿದ್ದವರು ಹೇಗೆ ನಾಶವಾಗುತ್ತಾರೆ' ಎಂಬುದನ್ನು ವಿವರಿಸಿದರು.

### ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ 3ನೇ ವರ್ಷದ ಪದವಿ ಪ್ರದಾನ ಸಮಾರಂಭ

# ಉತ್ತಮ ಬದುಕು ರೂಪಿಸಿಕೊಳ್ಳಲು ಪ್ಯಾರಾಮೆಡಿಕಲ್ ಕೋರ್ಸ್ ಸಹಾಯಕ



ಪಾವಗಡದ ಶ್ರೀರಾಮಕೃಷ್ಣ ಆಶ್ರಮದ ಪೂಜ್ಯಶ್ರೀಜಪಾನಂದ ಸ್ವಾಮೀಜಿ, ಡಾ.ಎಂ.ಆರ್.ಹುಲಿನಾಯ್ಕರ್, ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ನಿರ್ದೇಶಕರಾದ ಡಾ.ಸುಜಾತ ರಾಥೋಡ್, ಡಾ.ಕೆ. ಆರ್.ವಿಜಯಕುಮಾರ್, ಡಾ.ರಮಣ್ ಆರ್ ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಟಿ.ವಿ.ಬ್ರಹ್ಮದೇವಯ್ಯ, ಡಾ.ಎಂ.ಸಿ.ಕೃಷ್ಣ, ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ ಪ್ರದೀಪ್‌ಕುಮಾರ್, ಮತ್ತು ಡಾ.ಸಿ.ಪಿ.ಚಂದ್ರಪ್ಪ.

"ವಿದ್ಯಾರ್ಥಿಗಳು ಶೈಕ್ಷಣಿಕ ಅರ್ಹತೆಯ ಆಧಾರದ ಮೇಲೆ ವೃತ್ತಿಬದುಕನ್ನು ರೂಪಿಸಿಕೊಳ್ಳಬೇಕು. ಇಂದು ಜಗತ್ತು ಕೌಶಲ ಮತ್ತು ಅರ್ಹತೆಯ ಮೇಲೆ ನಿಂತಿದೆ. ಅರೆ ವೈದ್ಯಕೀಯ ಕೋರ್ಸ್‌ಗಳಿಗೆ ಜಗತ್ತಿನ ಎಲ್ಲೆಡೆಯಿಂದ ಬೇಡಿಕೆಯಿದೆ. ನೀವು ಶೈಕ್ಷಣಿಕ ಅರ್ಹತೆ ಮತ್ತು ಕೌಶಲವನ್ನು ಗಳಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಪಾಲಿಸುತ್ತಾ ಬಂದರೆ, ನಿಮ್ಮ ವ್ಯಕ್ತಿತ್ವವನ್ನು ಸಮರ್ಥವಾಗಿ ರೂಪುಗೊಳ್ಳುತ್ತದೆ. ಆಗ ವಿಶ್ವದ ಯಾವ ಭಾಗದಲ್ಲಿದ್ದರೂ ನೀವು ಯಶಸ್ವಿ ಅರೆವೈದ್ಯಕೀಯ ಸಿಬ್ಬಂದಿಗಳಾಗುತ್ತೀರಿ" ಎಂದು ಪಾವಗಡದ ಶ್ರೀರಾಮಕೃಷ್ಣ ಆಶ್ರಮದ ಪೀಠಾಧಿಪತಿಗಳಾಗಿರುವ ಪೂಜ್ಯ ಶ್ರೀಜಪಾನಂದ ಸ್ವಾಮಿಗಳು ಹೇಳಿದರು. ಅವರು ಮುಂದುವರಿದು "ಪಾವಗಡದಲ್ಲಿರುವ ನಮ್ಮ ಸುಸಜ್ಜಿತ ಕಣ್ಣಿನ ಆಸ್ಪತ್ರೆ ಅತ್ಯಾಧುನಿಕ ಉಪಕರಣಗಳನ್ನು ಹೊಂದಿದೆ. ನಾವು ಕುಷ್ಠರೋಗಗಳಿಗೆ ಚಿಕಿತ್ಸೆ ಕೊಡುತ್ತೇವೆ. ಬಡರೋಗಿಗಳ ವಿಚಾರದಲ್ಲಿ ಕಾಳಜಿಯಿರಬೇಕು. ನಿಮಗಾಗಿ ಬದುಕನ್ನು ತ್ಯಾಗ ಮಾಡಿರುವ ತಂದೆ,ತಾಯಿಗಳ ವಿಚಾರದಲ್ಲಿ ಅಕ್ಕರೆಯಿರಬೇಕು. ಬೋಧಿಸಿದ ಅಧ್ಯಾಪಕರನ್ನು ಮರೆಯಬಾರದು. ನಿಮಗೆ ಬದುಕು ಕೊಟ್ಟ ಶ್ರೀದೇವಿ ವಿದ್ಯಾಸಂಸ್ಥೆಯ ಸಂಪರ್ಕವನ್ನು ಸದಾ ಇಟ್ಟುಕೊಂಡಿರಬೇಕು. ಸಮಾಜಕ್ಕೆ ಮಾದರಿಯಾಗುವಂತೆ ಬದುಕಬೇಕು. ವೈದ್ಯಕೀಯ ಕ್ಷೇತ್ರದದಲ್ಲಿರುವವರಿಗೆ ಮನುಷ್ಯತ್ವ ತುಂಬಾ ಅಗತ್ಯ. ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಾದ ತಾವು ಇಂದು ಪದವಿ ಸ್ವೀಕರಿಸುತ್ತಿದ್ದೀರಿ. ನಿಮ್ಮಲ್ಲಿ ಮಾನವೀಯ ಗುಣಗಳು ಬೆಳೆಯಬೇಕಾದ ಅಗತ್ಯವಿದೆ. ಅದನ್ನು ಬೆಳೆಸಿಕೊಳ್ಳಲು ನಿರ್ಧಾರ ಮಾಡಿ. ಆಗ ನಿಮ್ಮ ಪ್ಯಾರಾಮೆಡಿಕಲ್ ಪದವಿ ಸದ್ಬಳಕೆಯಾಗುತ್ತದೆ. ಕಲಿತ ವಿದ್ಯೆ ಸದ್ಬಳಕೆಯಾಗುವುದು ತುಂಬಾ ಅಗತ್ಯವಾಗಿದೆ" ಎಂದರು. ಅವರು ಮೇ 18 ರಂದು ಶ್ರೀದೇವಿ ಇನ್‌ಸ್ಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್ ಮತ್ತು ಶ್ರೀದೇವಿ ಇನ್‌ಸ್ಟ್ಯೂಟ್ ಆಫ್ ಅಲೈಡ್ ಹೆಲ್ತ್‌ಸೈನ್ಸ್‌ಗಳ ವತಿಯಿಂದ ನಡೆದ 3 ನೇ ವರ್ಷದ ಪದವಿ ಪ್ರದಾನ ಸಮಾರಂಭವನ್ನು ಅವರು ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್‌ರವರು ಮಾತನಾಡುತ್ತಾ "ವೈದ್ಯಕೀಯ ಶಿಕ್ಷಣ ಮತ್ತು ಸೇವೆ ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆದಿದೆ. ತಜ್ಞವೈದ್ಯರು ಮತ್ತು ನುರಿತ ವೈದ್ಯಕೀಯ ಸಿಬ್ಬಂದಿಗಳು ಜೊತೆಜೊತೆಯಲ್ಲೇ ಕೆಲಸ ನಿರ್ವಹಿಸುತ್ತಾರೆ. ಅವರು ವೈದ್ಯಕೀಯ ಕ್ಷೇತ್ರದ ಕಣ್ಣುಗಳಿದ್ದಂತೆ. ಸಮಾಜದಲ್ಲಿ ಉತ್ತಮ ಆರೋಗ್ಯ ಸೌಲಭ್ಯ ಕಲ್ಪಿಸಲು, ನುರಿತ ವೈದ್ಯರು, ತಂತ್ರಜ್ಞರು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಗಳ ಅಗತ್ಯವಿದೆ. ಚಿಕಿತ್ಸೆ ನೀಡುವ ವೈದ್ಯರು ಮತ್ತು ರೋಗಿಗಳ ಮಧ್ಯೆ ಉತ್ತಮ ಬಾಂಧವ್ಯವಿರಬೇಕು. ನಿರಂತರ ಕಾರ್ಯದ ಒತ್ತಡ ಮಧ್ಯೆಯೂ ವೈದ್ಯಕೀಯಕ್ಷೇತ್ರದಲ್ಲಿರುವವರು ಉತ್ತಮ ಜ್ಞಾನವನ್ನು ಪಡೆದುಕೊಳ್ಳಲು ವ್ಯಾಸಂಗವನ್ನು ಮಾಡುತ್ತಿರಬೇಕು. ರೋಗಿಗಳಿಗೆ ಹೆಚ್ಚಿನ ಚಿಕಿತ್ಸೆ ನೀಡುವಲ್ಲಿ ಪ್ಯಾರಾಮೆಡಿಕಲ್ ತಂತ್ರಜ್ಞರು ವಿಶೇಷ ಪಾತ್ರ ವಹಿಸುತ್ತಾರೆ. ಪ್ಯಾರಾಮೆಡಿಕಲ್ ಕೋರ್ಸ್‌ಗಳು ಇತ್ತೀಚಿನ ದಿನಗಳಲ್ಲಿ ವಿಸ್ತಾರವಾಗಿ ಬೆಳೆದಿದೆ. ನಮ್ಮ ಸಂಸ್ಥೆಯಲ್ಲಿ ಹೃದಯರೋಗ, ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ, ನರರೋಗ, ಮೂತ್ರಪಿಂಡ, ಆಂಕೊಲಾಜಿ, ಶ್ವಾಸಕೋಶಶಾಸ್ತ್ರ, ಪ್ಲಾಸಿಕ್ಟ್ ಸರ್ಜರಿಗೆ ಸಂಬಂಧಪಟ್ಟಂತೆ ಪ್ಯಾರಾಮೆಡಿಕಲ್ ಕೋರ್ಸ್‌ಗಳಿವೆ. ರೇಡಿಯಾಲಜಿ ವಿಭಾಗಕ್ಕೆ ಸಂಬಂಧಪಟ್ಟಂತೆ ಸಿ.ಟಿ. ಮತ್ತು ಎಂ.ಆರ್.ಐ. ತಂತ್ರಜ್ಞರ ಕೋರ್ಸ್ ಲಭ್ಯವಿದೆ" ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣದ ನಿರ್ದೇಶಕರಾದ ಡಾ.ಸುಜಾತ ರಾಥೋಡ್ ಅವರು ಮಾತನಾಡುತ್ತಾ "ಪ್ಯಾರಾಮೆಡಿಕಲ್ ಅಲೈಡ್ ಹೆಲ್ತ್ ಸೈನ್ಸ್‌ಗಳು. ಇವು ಹೆಚ್ಚಾಗಿ ಆಸ್ಪತ್ರೆಗಳಲ್ಲಿ ಉಪಯೋಗಕ್ಕೆ ಬರುತ್ತವೆ. ಕ್ಲಿಷ್ಟಕರ ಶಸ್ತ್ರಚಿಕಿತ್ಸೆ, ವೈದ್ಯಕೀಯ ಚಿಕಿತ್ಸೆ, ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗ, ರಕ್ತನಿಧಿ ಕೇಂದ್ರ ಮತ್ತು ಕೇಂದ್ರೀಯ ಪ್ರಯೋಗಾಲಯ ಶಾಲೆಗಳಲ್ಲಿ ತಂತ್ರಜ್ಞರು ತಮ್ಮ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಬೇಕು. ಸದರಿ ಕಾರ್ಯದಲ್ಲಿ ಶಸ್ತ್ರಚಿಕಿತ್ಸಕರು ಮತ್ತು ಪ್ರಯೋಗಾಲಯದ ತಂತ್ರಜ್ಞರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ನಿರ್ವಹಿಸಿದರೆ ಸಂಸ್ಥೆಗೆ ಒಳ್ಳೆಯ ಹೆಸರು ಬರುತ್ತದೆ. ಅಂತಿಮವಾಗಿ ರೋಗಿಗಳು ಅದರಿಂದ ಪ್ರಯೋಜನ ಪಡೆಯುತ್ತಾರೆ" ಎಂದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ ರಮಣ ಅವರು ವಾರ್ಷಿಕ ವರದಿಯನ್ನು ಮಂಡಿಸಿ "ಶ್ರೀದೇವಿ ಶಿಕ್ಷಣ ಸಂಸ್ಥೆಯೂ ಸುಮಾರು 30 ವರ್ಷಗಳಿಂದ ರಾಜ್ಯದ ಶೈಕ್ಷಣಿಕಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಾ ಬಂದಿದೆ. ರಾಜ್ಯದ ಶಿಕ್ಷಣ ಕ್ಷೇತ್ರಕ್ಕೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಕೊಡುಗೆ ಅಪಾರ. ಪ್ಯಾರಾಮೆಡಿಕಲ್‌ನಲ್ಲಿ 7 ಡಿಪ್ಲೊಮಾ ಕೋರ್ಸ್‌ಗಳು, 11 ಬಿ.ಎಸ್‌ಸಿ. ಕೋರ್ಸ್‌ಗಳು, 8 ಎಂ.ಎಸ್‌ಸಿ. ಕೋರ್ಸ್‌ಗಳಿವೆ. ಈ ಎಲ್ಲಾ ಕೋರ್ಸ್‌ಗಳು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ ಅಂಗೀಕೃತಗೊಂಡಿದೆ. ನಮ್ಮ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ದೇಶ ಹಾಗೂ ವಿದೇಶಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡುವುದರಲ್ಲಿ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳು ಬದ್ಧವಾಗಿವೆ.

'ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯೂ ಸುಮಾರು 850 ಸುಸಜ್ಜಿತ ಹಾಸುಗೆಗಳನ್ನು ಹೊಂದಿದೆ. ಕೌಶಲಾಭಿವೃದ್ಧಿಗೋಸ್ಕರ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ "ಸ್ಕಿಲ್‌ಲ್ಯಾಬ್" ಅಭಿವೃದ್ಧಿಪಡಿಸಲಾಗಿದೆ. ವಿಶೇಷ ಪ್ರಯೋಗಾಲಯಗಳು ಹಾಗೂ ಅದಕ್ಕೆ ಸಂಬಂಧಪಟ್ಟ ತಂತ್ರಜ್ಞರು, ವೈದ್ಯರು ಮತ್ತು ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಶ್ರಮಿಸುತ್ತಿದ್ದಾರೆ" ಎಂದರು.

ಇದೇ ಸಂದರ್ಭದಲ್ಲಿ ಪದವಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ಕೆ.ಆರ್.ವಿಜಯಕುಮಾರ್ ಅವರು ಮಾತನಾಡುತ್ತಾ "ಡಿಪ್ಲೋಮಾ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಬಿ.ಎಸ್‌ಸಿ. ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆಯಿರಿ. ಅದೇ ರೀತಿ ಬಿ.ಎಸ್‌ಸಿ. ಶಿಕ್ಷಣ ಪಡೆದವರು ಸ್ನಾತಕೋತ್ತರ ಶಿಕ್ಷಣ ಪಡೆಯಬೇಕು. ಮೊದಲ ಐವತ್ತು ರ್‍ಯಾಂಕ್‌ಗಳಿಗೆ ಶೇಕಡಾ ಕಡಿಮೆ ಶುಲ್ಕವನ್ನು ಪಡೆದು ಪ್ರವೇಶಾವಕಾಶ ನೀಡಲಾಗುತ್ತದೆ. 3ನೇ ವರ್ಷ ಪದವಿ ಪ್ರದಾನ ಸಮಾರಂಭದಲ್ಲಿ ಒಟ್ಟು 120 ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಅತಿ ಹೆಚ್ಚು ಅಂಕಗಳಿಸಿದ ಕು.ಪಲ್ಲವಿ ಅವರಿಗೆ ಶ್ರೀಮಂಡಲಗಿರಿಯವರ ತಮ್ಮ ಧರ್ಮಪತ್ನಿಯವರ ಬಸವರಾಜೇಶ್ವರಿಯವರ ಜ್ಞಾಪಕಾರ್ಥವಾಗಿಟ್ಟಿರುವ ಚಿನ್ನದ ಪದಕವನ್ನು ನೀಡಿ ಗೌರವಿಸಲಾಗಿದೆ. ಶ್ವಾಸಕೋಶ ಚಿಕಿತ್ಸಾ ವಿಭಾಗದಲ್ಲಿ ಅತ್ಯುತ್ತಮ ಅಂಕಗಳಿಸಿದ ಕು.ಪಲ್ಲವಿ ಅವರನ್ನು ಈ ಸಮಾರಂಭದ ಗೌರವ ಅತಿಥಿಯನ್ನಾಗಿ ಮಾಡಲಾಗಿದೆ" ಎಂದರು.

ಪ್ರಾರಂಭದಲ್ಲಿ ಕು.ವೈಷ್ಣವಿ ಪ್ರಾರ್ಥನೆ ಮಾಡಿದರು. ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ ಸ್ವಾಗತಿಸಿದರು, ಡಾ.ಪವಿತ್ರ ಹಾಗೂ ಸ್ವರೂಪ್‌ರಾಣಿಯವರು ಕಾರ್ಯಕ್ರಮ ನಿರೂಪಿಸಿದರು. ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ ವಂದನೆ ಸಲ್ಲಿಸಿದರು.

ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ ಪ್ರದೀಪ್‌ಕುಮಾರ್, ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ ಮೊದಲಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

■ ವರದಿ: ಎನ್. ಆನಂದ

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

# ಹೋರಾಟಗಾರರೊಬ್ಬರಿಗೆ ರಾಷ್ಟ್ರೀಯ ಮಾನ್ಯತೆ

◂◂ ...ಮೊದಲನೇ ಪುಟದಿಂದ

ಡಾ.ಅಂಬೇಡ್ಕರ್ ಪ್ರಕಾರ "ಒಳ್ಳೆಯ ಸರ್ಕಾರ ಎಂದರೆ ಒಳ್ಳೆಯ ಕಾನೂನು ಮತ್ತು ಒಳ್ಳೆಯ ಆಡಳಿತ. ಇವೆರಡೂ ಸರ್ಕಾರದ ಸಾರಸರ್ವಸ್ವ. ಇವೆರಡೂ ಇಲ್ಲದೆ ಬೇರೇನೂ ಇಲ್ಲ. ಆದರೆ ಆಡಳಿತದ ಹೊಣೆಯನ್ನು ಹೊತ್ತ ಜನ ಇಡೀ ಸಮಾಜದ ಹಿತ ಮತ್ತು ಶೋಷಿತರ ಹಿತ ಮರೆತರೆ ಮೇಲೆ ಹೇಳಿದ ಅರ್ಥದಲ್ಲಿ ಒಳ್ಳೆಯ ಸರ್ಕಾರವಾಗಲಾರದು".



ಪ್ರಧಾನಿ ನರೇಂದ್ರ ಮೋದಿ ಸಚಿವ ಸಂಪುಟದಲ್ಲಿ ಕೇಂದ್ರ ಸಚಿವರಾಗಿ ಪ್ರಮಾಣವಚನ.

### ಸಾರ್ವಜನಿಕ ಕ್ಷೇತ್ರದಲ್ಲಿ ನಾಲ್ಕು ದಶಕಗಳು

ಮಾನ್ಯ ಸೋಮಣ್ಣ ಕಳೆದ ನಲವತ್ತು ವರ್ಷಗಳಿಂದ ಆಡಳಿತ ಕ್ಷೇತ್ರದಲ್ಲಿದ್ದಾರೆ. 1983ರಲ್ಲಿ ಬೆಂಗಳೂರು ಮಹಾನಗರಪಾಲಿಕೆ ಸದಸ್ಯರಾಗಿ ವಿಜಯನಗರವಾರ್ಡ್‌ನಿಂದ ಚುನಾಯಿತರಾದ ದಿನದಿಂದಲೇ ಸೋಮಣ್ಣ ಅವರು ಸಾರ್ವಜನಿಕಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಭಕ್ತಿಭಂಡಾರಿ ಬಸವಣ್ಣ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿರುವ ಸೋಮಣ್ಣ ಸಮಾಜ ಎಲ್ಲಾ ವರ್ಗದವರನ್ನು ತಮ್ಮ ಜೊತೆ ಕರೆದುಕೊಂಡ ಹೋಗುತ್ತಿರುವ ಕಾರಣಕ್ಕಾಗಿ ಇಂದು ಪ್ರಧಾನಿ ಶ್ರೀನರೇಂದ್ರಮೋದಿ ಸಚಿವ ಸಂಪುಟದಲ್ಲಿ ಸಚಿವರಾಗುವ ಭಾಗ್ಯ ಪಡೆದಿದ್ದಾರೆ. ಡಾ.ಅಂಬೇಡ್ಕರ್ ತತ್ವಗಳ ಅನುಸಾರ ರಾಜಕಾರಣ ಮಾಡಿರುವ ಕಾರಣ ಸಮಾಜದ ಎಲ್ಲಾ ವರ್ಗದ ಜನರಿಂದಲೂ ಬೆಂಬಲ ಗಳಿಸಿ ಅದನ್ನು ಬೆಳೆಸಿಕೊಳ್ಳುತ್ತಾ ಬಂದಿದ್ದಾರೆ.

ಮಾನ್ಯ ಸೋಮಣ್ಣ ಅವರ ಬೆಳವಣಿಗೆಗೆ ಅವರ ಬದುಕು ಹಾಗು ಅವರ ಪ್ರಯತ್ನಶೀಲತೆ ಕಾರಣವಾಗಿದೆ. ಗ್ರಾಮೀಣ ಪ್ರದೇಶದ ರೈತರ ಮಗನೊಬ್ಬ ಇಂದು ಕೇಂದ್ರ ಸಚಿವರಾಗಬಹುದು ಎನ್ನುವುದನ್ನು ನಮ್ಮ ಸಂವಿಧಾನ ಹೇಳುತ್ತದೆ. ಜೊತೆಗೆ ವ್ಯಕ್ತಿ ಈ ಮಟ್ಟಕ್ಕೇರಲು ಮಾಡುವ ಪ್ರಯತ್ನ ಸಹ ಮುಖ್ಯವಾಗುತ್ತದೆ. ಅನೇಕರಿಗೆ ಸ್ಫೂರ್ತಿ ಮತ್ತು ಪ್ರೇರಣೆ ಕೊಡುವ ಬದುಕು ಮಾನ್ಯ ಸೋಮಣ್ಣ ಅವರದು. ಒಮ್ಮೆ ಅದರ ಸಿಂಹಾವಲೋಕನ ಮಾಡೋಣ!

### ಅಲ್ಪ ತೃಪ್ತರಲ್ಲ ಮಹತ್ವದ್ದನ್ನು ಸಾಧಿಸುವ ಛಲವಾದಿ

ಇಂದಿನ ರಾಮನಗರ ಜಿಲ್ಲೆಯ ಹಾರೋಹಳ್ಳಿ ತಾಲ್ಲೂಕಿನ ದೊಡ್ಡಮರಳವಾಡಿಯಲ್ಲಿ ಮಾನ್ಯ ಸೋಮಣ್ಣ ಅವರು 20.ಜುಲೈ.1950ರಲ್ಲಿ ಜನಿಸುತ್ತಾರೆ. ತಂದೆ ವೀರಣ್ಣ, ತಾಯಿ ಕೆಂಪಮ್ಮ. ಇವರ ಜೊತೆ ಹುಟ್ಟಿದವರು ನಾಲ್ಕು ಜನ ಅಣ್ಣಂದಿರು. ಒಬ್ಬರು ಅಕ್ಕ. ಮತ್ತೊಬ್ಬರು ತಂಗಿ. ವೀರಣ್ಣ ಅವರ ಕುಟುಂಬ ಕೆಲವು ಕಾರಣಗಳಿಗಾಗಿ ದೊಡ್ಡಮರಳವಾಡಿ ಬಿಟ್ಟು ಯಲವನಾಥ ಗ್ರಾಮಕ್ಕೆ ಹೋಗಿ ನೆಲೆಸುತ್ತದೆ. ಆ ಗ್ರಾಮವಾದರೋ ಯಾವುದೇ ಸೌಲಭ್ಯವಿಲ್ಲದ, ತಮಿಳುನಾಡಿನ ಗಡಿಭಾಗಕ್ಕೆ ಸೇರಿದ ಪ್ರದೇಶ.

ಪ್ರಾಥಮಿಕ ಶಿಕ್ಷಣವನ್ನು ಚಿಕ್ಕಮುದವಾಡಿಯಲ್ಲಿ ಮಾಡಿ, ಪ್ರೌಢಶಾಲಾ ಶಿಕ್ಷಣಕ್ಕೆ ಕನಕಪುರ ಮುನ್ಸಿಪಲ್ ಶಾಲೆಗೆ ಸೇರುತ್ತಾರೆ. ಪಿಯು ಶಿಕ್ಷಣವನ್ನು ಕನಕಪುರ ರೂರಲ್ ಶಿಕ್ಷಣ ಸಂಸ್ಥೆಯಲ್ಲಿ ಮುಗಿಸುತ್ತಾರೆ. ಸ್ವಭಾವತಃ ಸೋಮಣ್ಣ ಅವರು ಸಾಹಸಪ್ರವೃತ್ತಿಯುಳ್ಳವರು. ಬೆಂಗಳೂರಿಗೆ ಬಂದು ಅನೇಕ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ಜನತಾಬಜಾರ್‌ನಲ್ಲಿ 'ಸೇಲ್ಸ್ ಅಸಿಸ್ಟೆಂಟ್' ಆಗಿ ಸೇರ್ಪಡೆಯಾಗುತ್ತಾರೆ. ದೊರೆತ ಕೆಲಸದಲ್ಲಿ ಸಂತೃಪ್ತಿ ಹೊಂದಿದವರಲ್ಲ. ವಿಜಯಾ ಬ್ಯಾಂಕ್‌ನಲ್ಲಿ ಪಿಗ್ಮಿ ಕಲೆಕ್ಟರ್ ಕೆಲಸ ಮಾಡುತ್ತಾರೆ. ಎಲ್.ಐ.ಸಿ. ಏಜೆಂಟ್ ಆಗುತ್ತಾರೆ.

ಈ ನಡುವೆ 1977ರ ಮೇ.25ರಂದು ಗಂಗಪ್ಪಾರಾಧ್ಯ ಮತ್ತು ರುದ್ರಮ್ಮ ದಂಪತಿಗಳ ಮಗಳು ಶೈಲಜಾ ಅವರೊಡನೆ ವಿವಾಹವಾಗುತ್ತದೆ. ಇದು ಸೋಮಣ್ಣ ಅವರ ಬದುಕಿಗೆ ತಿರುವು ನೀಡಿದ ವಿಶಿಷ್ಟ ಘಟನೆಯಾಗಿದೆ. ಸೋಮಣ್ಣ ದಂಪತಿಗಳಿಗೆ ಮೂರು ಜನ ಮಕ್ಕಳು. ಡಾ.ನವೀನ್ ಸೋಮಣ್ಣ, ಡಾ.ಅರುಣ್ ಸೋಮಣ್ಣ ಮತ್ತು ಶ್ರೀಮತಿ ವಿದ್ಯಾ ಅವಿನಾಶ್. ಮಾನ್ಯ ಸೋಮಣ್ಣ ಅವರು ಹೇಳಿದ ಮಾತಿನಿಂದಲೇ ಅವರ ಆದರ್ಶ ಕುಟುಂಬದ ವಿಚಾರವನ್ನು ಊಹಿಸಿಕೊಳ್ಳಬಹುದು. ಅವರು ಒಂದೆಡೆ ಹೀಗೆ ಹೇಳಿದ್ದಾರೆ. "ಒಬ್ಬ ವ್ಯಕ್ತಿ ದೊಡ್ಡವನಾಗುವುದು ಅವನ ಸ್ವಂತ ಬಲದಿಂದಲ್ಲ, ಬರಿ ಚಟುವಟಿಕೆಯಿಂದಲೂ ಅಲ್ಲ, ಇನ್ನು ನಡವಳಿಕೆಯಿಂದ ಅಲ್ಲ. ಒಳ್ಳೆಯ ಸ್ನೇಹಿತರಿದ್ದರೆ, ಸದಾ ಬೆಂಗಾವಲಾಗಿರುವ ಕುಟುಂಬವಿದ್ದರೆ ಆ ವ್ಯಕ್ತಿ ಯಶಸ್ವಿ ವ್ಯಕ್ತಿಯಾಗುತ್ತಾನೆ". ಮಾನ್ಯ ಸೋಮಣ್ಣ ಅವರ ಮಾತು ಅವರ ವೈಯಕ್ತಿಕ ಜೀವನಕ್ಕೆ ಪೂರ್ಣವಾಗಿ ಸರಿಹೊಂದುತ್ತದೆ.

ಮೊದಲೇ ಹೇಳಿದಂತೆ ಮಾನ್ಯ ಸೋಮಣ್ಣ ಅವರಲ್ಲಿ ಕುವೆಂಪು ಹೇಳುವಂತೆ ಮಹತ್ವದ್ದನ್ನು ಸಾಧಿಸಬೇಕು ಎನ್ನುವ ಅದಮ್ಯ ಆಕಾಂಕ್ಷೆಯಿತ್ತು. ಅದರ ಫಲವಾಗಿ 1982ರಲ್ಲಿ ಜನತಾ ಬಜಾರ್‌ನ ಕೆಲಸವನ್ನು ತೊರೆದು ಸಾರ್ವಜನಿಕಕ್ಷೇತ್ರಕ್ಕೆ ಧುಮುಕಿದರು.

### ದೊಡ್ಡವರು ಗುರುತಿಸಿದ ಪ್ರತಿಭೆ

1982–83 ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹೊಸಪರ್ವ ಪ್ರಾರಂಭವಾದ ಗಳಿಗೆ. ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಕಾಲ ರಾಜ್ಯದಲ್ಲಿ ರಾಜ್ಯಭಾರ ನಡೆಸಿದ ಕಾಂಗ್ರೆಸ್‌ಪಕ್ಷ ತನ್ನ ಸ್ಥಾನವನ್ನು ಜನತಾಪಕ್ಷಕ್ಕೆ ಬಿಟ್ಟುಕೊಟ್ಟಿತ್ತು. ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾದ ಮೇಲೆ ಕನಕಪುರ ವಿಧಾನಸಭಾಕ್ಷೇತ್ರದಿಂದ ಉಪಚುನಾವಣೆಗೆ ಸ್ಪರ್ಧೆ ಮಾಡಿದರು. ಆ ಉಪಚುನಾವಣೆಯಲ್ಲಿ ಸೋಮಣ್ಣ ಯುವನಾಯಕರಾಗಿ ಮಾಡಿದ ಕೆಲಸ ಅಂದಿನ ಜನತಾಪಕ್ಷದ ಅಧ್ಯಕ್ಷರಾದ ಚಂದ್ರಶೇಖರ್ ಅವರ ಗಮನ ಸೆಳೆಯಿತು.

ಮುಂದೆ 1985ರಲ್ಲಿ ಬೆಂಗಳೂರು ಮಹಾನಗರಪಾಲಿಕೆಯ ಸದಸ್ಯತ್ವಕ್ಕೆ ಸ್ಪರ್ಧಿಸಲು ಚಂದ್ರಶೇಖರ್ ಅವರ ಆಶೀರ್ವಾದವು ಕಾರಣವಾಯಿತು. ಮಾನ್ಯ ಸೋಮಣ್ಣ ಅವರು ಸುದೀರ್ಘ ಕಾಲ ಜನಪ್ರತಿನಿಧಿಯಾಗಿ ಕೆಲಸ



ಸಿದ್ಧಗಂಗಾ ಮಠದ ಮಠಾಧೀಶರಾದ ಶ್ರೀ ಸಿದ್ಧಲಿಂಗಸ್ವಾಮಿಗಳು ಮತ್ತು ವಿ.ಸೋಮಣ್ಣ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗೌರವಿಸಿದರು.

ಮಾಡಿದ್ದಾರೆ. ಎರಡು ಸಲ ಬಿಬಿಎಂಪಿಯ ಸದಸ್ಯರು, ಐದು ಸಲ ಶಾಸಕರು, ಎರಡು ಸಲ ವಿಧಾನಪರಿಷತ್ತಿನ ಸದಸ್ಯರು, ಆರು ಸಲ ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿ ಕೆಲಸ ಮಾಡಿದ್ದಾರೆ.

ಇದೀಗ ತುಮಕೂರಿನಿಂದ ಲೋಕಸಭಾ ಸದಸ್ಯರು. ಅದೇ ರೀತಿ ಪ್ರಧಾನಿ ಸನ್ಮಾನ್ಯ ನರೇಂದ್ರ ಮೋದಿ ಸಚಿವ ಸಂಪುಟದಲ್ಲಿ ಸದಸ್ಯರು. ಮಾನ್ಯ ಸೋಮಣ್ಣ ಅವರು ತುಮಕೂರು ಜಿಲ್ಲೆಗೆ ಕೇಂದ್ರ ಸಚಿವಸಂಪುಟದಲ್ಲಿ ಸ್ಥಾನ ತಂದುಕೊಟ್ಟು ಇತಿಹಾಸ ನಿರ್ಮಿಸಿದ್ದಾರೆ.

### ಕೃತಜ್ಞತೆಯ ಸ್ವಭಾವ

ಮಾನ್ಯ ಸೋಮಣ್ಣ ಅವರಲ್ಲಿ ವಿಶೇಷವಾಗಿ ಗುರುತಿಸಬೇಕಾದ ಗುಣ ಕೃತಜ್ಞತೆ. ತಮ್ಮ ಮೇಲೆ ಪ್ರಭಾವ ಬೀರಿದ ಮತ್ತು ಅನೇಕ ಸಂದರ್ಭದಲ್ಲಿ ಸಹಾಯ ಮಾಡಿದ ವ್ಯಕ್ತಿಗಳನ್ನು ಅವರು ಸದಾ ಸ್ಮರಿಸುತ್ತಾರೆ. ದೇಗುಲಮಠದ ಪೂಜ್ಯ ಶ್ರೀಇಮ್ಮಡಿ ಮಹಾಲಿಂಗಸ್ವಾಮಿ, ಕನಕಪುರ ರೂರಲ್ ಶಿಕ್ಷಣ ಸಂಸ್ಥೆಯ ರೂವಾರಿ ಎಸ್.ಕರಿಯಪ್ಪ ಅವರುಗಳು ಸೋಮಣ್ಣ ಅವರ ಮೇಲೆ ಪ್ರಾರಂಭದಲ್ಲಿ ಅಸಾಧಾರಣ ಪ್ರಭಾವ ಬೀರಿದ್ದಾರೆ.

ರಾಜ್ಯ ಎಲ್ಲಾ ಮಠಗಳ ಪೀಠಾಧಿಪತಿಗಳು ಸೋಮಣ್ಣ ಅವರ ವಿಚಾರದಲ್ಲಿ ಅಭಿಮಾನದ ಮಾತುಗಳನ್ನು ಹೇಳುತ್ತಾರೆ. ವಿಶೇಷವಾಗಿ ಸಿದ್ಧಗಂಗಾ ಮಠದ ಪರಮಪೂಜ್ಯ ಡಾ.ಶಿವಕುಮಾರಸ್ವಾಮಿಗಳ ಪ್ರಭಾವ ಸೋಮಣ್ಣ ಅವರ ಮೇಲೆ ಅತಿ ಗರಿಷ್ಠ ಪ್ರಮಾಣದಲ್ಲಿದೆ. ಪೂಜ್ಯಶ್ರೀಗಳ ಮಾತೆಂದರೆ ಸೋಮಣ್ಣ ಅವರಿಗೆ ವೇದವಾಕ್ಯ.

ಮತ್ತೊಬ್ಬ ಅಧ್ಯಾತ್ಮಚೇತನ ಆದಿಚುಂಚನಗಿರಿಯ ಪರಮ ಪೂಜ್ಯಶ್ರೀ ಬಾಲಗಂಗಾಧರನಾಥಸ್ವಾಮಿಗಳು. ಮಾನ್ಯ ಸೋಮಣ್ಣ ಅವರು ಅವರಿಬ್ಬರಿಗೆ ಕೇವಲ ಮಾತಿನಲ್ಲಿ ಗೌರವ ಅರ್ಪಿಸಲಿಲ್ಲ. ಬೆಂಗಳೂರಿನ ನಾಗರಿಕರು ಸದಾ ಅವರನ್ನು ಜ್ಞಾಪಿಸಿಕೊಳ್ಳುವಂತೆ ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದ್ದಾರೆ.

ಇನ್ನು ರಾಜಕೀಯವಾಗಿ ತಮಗೆ ಸಹಾಯ ಮಾಡಿದ ಪ್ರತಿಯೊಬ್ಬರನ್ನು ಅವರು ನೆನೆಯುತ್ತಾರೆ. ಅವರಲ್ಲಿ ವಿ.ಎಸ್. ಕೃಷ್ಣಯ್ಯರ್, ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್, ಎಚ್.ಡಿ.ದೇವೇಗೌಡ, ಬಿ.ಎಲ್.ಶಂಕರ್, ಪಿ.ಜಿ.ಆರ್.ಸಿಂಧ್ಯ, ಬಿಜೆಪಿಯಲ್ಲಿ ಸಹಾಯ ಮಾಡಿದ ಯಡಿಯೂರಪ್ಪ, ಅನಂತಕುಮಾರ್ ಹಾಗೂ ಈಗ ಮಾರ್ಗದರ್ಶನ ಮಾಡುತ್ತಿರುವ ಪ್ರಧಾನಿ ನರೇಂದ್ರಮೋದಿ ಹಾಗೂ ಸಚಿವರಾಗಿರುವ ಅಮಿತ್ ಷಾ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರುಗಳನ್ನು ಮರೆಯುವುದಿಲ್ಲ.

### ಮತದಾರರಿಗೆ ಋಣಿ

ಮಾನ್ಯ ಸೋಮಣ್ಣ ಅವರು ಎಂದೂ ನಾಯಕರ ಹಿಂದೆ, ಮುಂದೆ ಸುತ್ತಿ ನಾಯಕತ್ವ ಬೆಳೆಸಿಕೊಂಡವರಲ್ಲ. ಸೋಮಣ್ಣ ಅವರಿಗೆ ಮತದಾರರೇ ಬಂಧುಗಳು. ವಿಜಯನಗರ ಬಡಾವಣೆಯಲ್ಲಿ ಸೋಮಣ್ಣ ಅವರ ಮಾಡಿದ ಅಭಿವೃದ್ಧಿ ಕೆಲಸಗಳು ಇಂದಿಗೂ ಅವರಿಗೆ ರಕ್ಷಣೆ ನೀಡಿದೆ. ಮಹಾನಗರಪಾಲಿಕೆಯ ಸದಸ್ಯರಾಗಿ ಬಿಬಿಎಂಪಿಯ ಆರ್ಥಿಕ ಸಮಿತಿಯ ಅಧ್ಯಕ್ಷರಾಗಿ ಸೋಮಣ್ಣ ಅವರು ಆಗ ಮಾಡಿದ ಅಭಿವೃದ್ಧಿ ಕೆಲಸಗಳಿಂದಾಗಿ ಇತಿಹಾಸ ರಚಿಸಿದ್ದಾರೆ. ಪಾಲಿಕೆ ಹೇಗೆ ಸಂಪನ್ಮೂಲವನ್ನು ಸಂಗ್ರಹಿಸಬೇಕು, ಸಂಗ್ರಹಿಸಿದ ಸಂಪನ್ಮೂಲವನ್ನು ನಾಗರಿಕರಿಗೆ ಯಾವ ರೀತಿ ವ್ಯಯಮಾಡಬೇಕು ಎನ್ನುವ ಮಾರ್ಗದರ್ಶಿ ಸೂತ್ರವನ್ನು ಕೊಟ್ಟ ಕೀರ್ತಿ ಸೋಮಣ್ಣ ಅವರಿಗೆ ಸಲ್ಲುತ್ತದೆ.

### ಬೆಂಗಳೂರಿಗೆ ಹೊಸ ಸ್ವರೂಪ

1994ರಲ್ಲಿ ಬಿನ್ನಿಪೇಟೆಯಿಂದ ಶಾಸಕರಾಗಿ ಜೆ.ಎಚ್.ಪಟೇಲ್‌ರ ಸಚಿವ ಸಂಪುಟದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರಾದ ವಿ.ಸೋಮಣ್ಣ ಅಂದು ಬೆಂಗಳೂರಿಗೆ ಮೂಲಭೂತ ಸೌಕರ್ಯ ಒದಗಿಸಲು ಮಾಡಿದ ಕಾರ್ಯದಿಂದಾಗಿ ಮುಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಬೆಂಗಳೂರು 'ಐ.ಟಿ.ಹಬ್' ಆಗಲು ಕಾರಣವಾಯಿತು. ಅದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಈ ಸಮಯದಲ್ಲಿ ಬೆಂಗಳೂರಿನಲ್ಲಿ ನಿರ್ಮಾಣವಾದ ಮೇಲುಸೇತುವೆ, ಕೆಳಸೇತುವೆ, ರಿಂಗ್‌ರೋಡ್, ರಾಜಕಾಲುವೆ (Storm water drain), ನಾಗರಿಕರಿಗೆ ಕುಡಿಯುವ ನೀರಿಗೆ ಕಾವೇರಿ 4ನೆಯ ಹಂತದ ಯೋಜನೆಯ ಅನುಷ್ಠಾನ, ಖಾಸಗಿ ಬಡಾವಣೆಗೆ ಮಾನ್ಯತೆ, ರೆವಿನ್ಯೂ ನಿವೇಶನಗಳಲ್ಲಿ ಮನೆ ಕಟ್ಟಿರುವವರಿಗೆ ಮೂಲಭೂತ ಸೌಕರ್ಯ, ಹೈಟೆಕ್ ಗ್ರಂಥಾಲಯ ಸ್ಥಾಪನೆ, ಐ.ಎ.ಎಸ್, ಐ.ಪಿ.ಎಸ್. ಮತ್ತು ಕೆ.ಎ.ಎಸ್. ವ್ಯಾಸಂಗ ಮಾಡುವ ಮಕ್ಕಳಿಗೆ ಕೋಚಿಂಗ್ ಸೆಂಟರ್, ಬೆಂಗಳೂರಿಗೆ ಸರ್ಕಲ್‌ನಲ್ಲಿ ಹೈಮಾಸ್ಟ್ ವಿದ್ಯುತ್ ದೀಪಗಳು ಅಳವಡಿಕೆ, ಸಿರ್ಸಿವೃತ್ತದಿಂದ ಪುರಸಭೆ ತನಕ ಬಾಲಗಂಗಾಧರನಾಥ ಮೇಲುಸೇತುವೆ, ಹೊಸಬಡಾವಣೆಗಳ ನಿರ್ಮಾಣ, ಮೈಸೂರು



ಡಾ. ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಸೋಮಣ್ಣ ಅವರ ಕುಟುಂಬ.

ರಸ್ತೆಯಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್‌ನಿಲ್ದಾಣ ಮೊದಲಾದ ಅಭಿವೃದ್ಧಿ ಕೆಲಸಗಳು ಸೋಮಣ್ಣ ಅವರಿಗೆ ಶಾಶ್ವತವಾದ ಕೀರ್ತಿಯನ್ನು ತಂದುಕೊಟ್ಟಿವೆ.

**ಎಲ್ಲರಿಗೂ ಸೂರು**

ವಸತಿ ಮತ್ತು ಮೂಲಭೂತ ಸೌಕರ್ಯ ಸಚಿವರಾಗಿ ಸೋಮಣ್ಣ ಅವರು ಉತ್ತಮ ಕೆಲಸ ಮಾಡಿದ್ದಾರೆ. ಶ್ರೀಯುತರು ಹತ್ತು ಲಕ್ಷ ಮನೆಗಳ ನಿರ್ಮಾಣಕ್ಕೆ ಯೋಜನೆ ತಯಾರಿಸಿದ್ದರು. ಅದರಲ್ಲಿ ಮೂರು ಲಕ್ಷ ಮನೆಗಳು ಪೂರ್ಣಗೊಂಡು ಫಲಾನುಭವಿಗಳಿಗೆ ಹಸ್ತಾಂತರವಾಗಿದೆ. ಉಳಿದ ಮನೆಗಳ ನಿರ್ಮಾಣ ವಿವಿಧ ಹಂತದಲ್ಲಿದೆ. ವಸತಿ ಇಲಾಖೆಯಲ್ಲಿ ಪಾರದರ್ಶಕತೆ ತಂದ ಹೆಗ್ಗಳಿಕೆ ಸೋಮಣ್ಣ ಅವರದು. ವಸತಿ ಇಲಾಖೆಯಿಂದ ಮನೆ ಪಡೆಯುವವರು ಹಿಂದಿನಂತೆ ಪ್ರಕ್ರಿಯೆಗಳನ್ನು ಮುಗಿಸಲು ಸಾಹಸ ಪಡಬೇಕಾಗಿಲ್ಲ. ಈಗ ಸರಳ ಮತ್ತು ಪಾರದರ್ಶಕವಾಗಿರುವ ನಿಯಮಗಳನ್ನು ಜಾರಿಗೆ ತಂದಿದ್ದಾರೆ.

ಸೋಮಣ್ಣ ಅವರು ವಸತಿ ಸಚಿವರಾಗಿದ್ದಾಗ ಸುಡುಗಾಡು ಸಿದ್ಧರು, ಬುಡಬುಡಿಕೆಯವರು, ಬುಡಕಟ್ಟಿನ ಸಮುದಾಯದವರು, ಹಾಗೂ ಕಾಡಗೊಲ್ಲರ ಸಮುದಾಯದವರು ಯಥೇಚ್ಚ ಸಂಖ್ಯೆಯಲ್ಲಿ ಮನೆ ಪಡೆದಿದ್ದಾರೆ. ಪಾವಗಡದಲ್ಲಿರುವ ಗೊಲ್ಲ ಸಮುದಾಯದವರಿಗೆ ಮನೆಕಟ್ಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿನ ಫಲಾನುಭವಿಗಳಿಗೆ ಉತ್ತಮ ಸಮಾರಂಭವನ್ನು ಮಾಡಿದ್ದರು.

ಇವರು ವಸತಿ ಸಚಿವರಾಗಿದ್ದಾಗ 3.37ಲಕ್ಷ ಕುಟುಂಬಗಳಿಗೆ ಸ್ವಂತ ಸೂರಿನ ಭೂಮಾಲೀಕತ್ವ ಕೊಡಿಸಿದ್ದಾರೆ. ಬೆಂಗಳೂರು ನಗರದಲ್ಲಿ ಒಂದು ಲಕ್ಷ ಮನೆಗಳ ಬೃಹತ್ ಯೋಜನೆಗೆ ಚಾಲನೆ ನೀಡಿದ್ದಾರೆ.

**ಕೋವಿಡ್‌ನಲ್ಲಿ ಅಪರೂಪದ ಸೇವೆ**


ಮಾನ್ಯ ಸೋಮಣ್ಣ ಅವರು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಲ್ಲಿಗೆ ಮೆಡಿಕಲ್ ಕಾಲೇಜು ತಂದುಕೊಟ್ಟಿದ್ದಾರೆ. ಮಡಿಕೇರಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೋವಿಡ್ ಸಂದರ್ಭದಲ್ಲಿ 13 ಸಾವಿರ ಎ.ಐ.ಆ. ಆಕ್ಸಿಜೆನ್ ಪ್ಲಾಂಟ್ ನಿರ್ಮಾಣ ಮಾಡಿದ್ದಾರೆ. ಇದರಿಂದ ಸಾವಿರಾರು ಜನರ ಪ್ರಾಣ ಉಳಿಯುವಂತಾಯಿತು.

ಬೆಂಗಳೂರಿನ ಶಿವಾಜಿನಗರ, ಶಾಂತಿನಗರ, ಪುಲಕೇಶಿನಗರ, ಗೋವಿಂದರಾಜನಗರ, ಸರ್ವಜ್ಞನಗರ ಹಾಗೂ ಸರ್ ಸಿ.ವಿ. ರಾಮನ್ ನಗರ ವಿಧಾನಸಭಾಕ್ಷೇತ್ರಗಳ ಜವಾಬ್ದಾರಿಯನ್ನು ಕೋವಿಡ್ ಸಂದರ್ಭದಲ್ಲಿ ಸೋಮಣ್ಣ ಅವರಿಗೆ ಕೊಡಲಾಗಿತ್ತು. ಅಲ್ಲಿ ಹೆಚ್ಚು ಕಡಿಮೆ ಬಿಜೆಪಿಯೇತರ ಶಾಸಕರಿದ್ದರು. ಅವರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸೋಮಣ್ಣ ಕೋವಿಡ್ ಸಂದರ್ಭದಲ್ಲಿ ಎಲ್ಲರಿಗೂ ಸಂತೃಪ್ತಿ ದೊರೆಯುವ ಕೆಲಸ ಮಾಡಿದ್ದಾರೆ.

**ತುಮಕೂರು ಜಿಲ್ಲೆಗೆ ನವಚೈತನ್ಯ ತುಂಬುವ ಅವಕಾಶ**

ಸಚಿವರಾದ ಸೋಮಣ್ಣ ಅವರಿಗೆ ಅಭಿವೃದ್ಧಿಯ ವಿಚಾರದಲ್ಲಿರುವ ಬದ್ಧತೆ ಕುರಿತು ಅನೇಕ ವಿಷಯಗಳನ್ನು ಉದಾಹರಣೆ ಕೊಡುತ್ತಾ ಹೋಗಬಹುದು. ಈಗ ಅವರು ರಾಜ್ಯ ರೈಲ್ವೆ ಮತ್ತು ಜಲಶಕ್ತಿಯ ಸಚಿವರಾಗಿರುವುದು ತುಮಕೂರು ಜನತೆಯ ಭಾಗ್ಯವೆಂದು ಭಾವಿಸಬೇಕಾಗಿದೆ. ಅವರ ಗಮನಕ್ಕೆ ತುಮಕೂರು ಜಿಲ್ಲೆಯ ಕೆಲವು ಸಮಸ್ಯೆಗಳನ್ನು ತರಬಯಸುತ್ತೇನೆ.

ತುಮಕೂರು ಜಿಲ್ಲೆಯ ಅನೇಕ ತಾಲ್ಲೂಕುಗಳನ್ನು ಡಾ.ಡಿ.ಎಂ.ನಂಜುಂಡಪ್ಪ ಪ್ರಾದೇಶಿಕ ಅಸಮತೋಲನ ಸಮಿತಿ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಿವೆ. ನಿರಂತರವಾಗಿ ಬರಕ್ಕೆ ತುತ್ತಾಗುವ ಜಿಲ್ಲೆಯಿದು. ಹೇಮಾವತಿ ನದಿಯ ನೀರು ಜಿಲ್ಲೆಯ ಕೊನೆಯ ಭಾಗಕ್ಕೆ ಬರುತ್ತಿಲ್ಲ. ಎತ್ತಿಹೊಳೆ ಕುಡಿಯುವ ನೀರಿನ ಯೋಜನೆ ಯಾವಾಗ



ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಜೊತೆ ಆಪ್ತ ಸಮಾಲೋಚನೆಯಲ್ಲಿ ಮಾನ್ಯ ಸೋಮಣ್ಣ ಅವರು.



ಮುತ್ಸದ್ದಿ ಸೋಮಣ್ಣ, ಶ್ರೀಮತಿ ಶೈಲಜಾ ಸೋಮಣ್ಣ ಅವರಿಗೆ ಆದಿಚುಂಚನಗಿರಿ ಪೀಠಾಧ್ಯಕ್ಷರಾಗಿದ್ದ ಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಆಶೀರ್ವದಿಸುತ್ತಿರುವುದು.

ಪೂರ್ಣಗೊಳ್ಳುತ್ತದೆ ಎಂಬುದೇ ತಿಳಿದಿಲ್ಲ. ಭದ್ರಾ ಮೇಲ್ದಂಡೆಯ ಯೋಜನೆಯಿಂದ ತುಮಕೂರಿನ ಕೆಲವು ತಾಲ್ಲೂಕುಗಳಿಗೆ ನೀರು ದೊರೆಯುತ್ತದೆ. ಆ ಯೋಜನೆಗೆ ವೇಗವನ್ನು ಕೊಡಬೇಕಾಗಿದೆ.

ತುಮಕೂರು ಮತ್ತು ದಾವಣಗೆರೆ ರೈಲ್ವೆ ಮಾರ್ಗ ಮತ್ತು ತುಮಕೂರು ರಾಯದುರ್ಗ ರೈಲ್ವೆ ಯೋಜನೆಗೆ ಕರ್ನಾಟಕದ ಕಡೆಯಿಂದ ಉತ್ತಮ ಪ್ರತಿಕ್ರಿಯೆ ದೊರೆಯದ ಕಾರಣ ತಟಸ್ಥವಾಗಿದೆ. ಜಿಲ್ಲೆಯಲ್ಲಿ ಉದ್ಯೋಗಸೃಷ್ಟಿಗೆ ಯಾರು ಗಮನ ಕೊಟ್ಟಿಲ್ಲ.

ತುಮಕೂರು ವಿಶ್ವವಿದ್ಯಾನಿಲಯ ದೊಡ್ಡ ಕಾಲೇಜು ಆಗಿದೆಯೇ ಹೊರತು ವಿಶ್ವವಿದ್ಯಾನಿಲಯದ ಸ್ವರೂಪ ಪಡೆದುಕೊಂಡಿಲ್ಲ. ತಾಲ್ಲೂಕು ಕೇಂದ್ರಗಳಲ್ಲಿ ಆರೋಗ್ಯವಲಯಕ್ಕೆ ದೊರೆಯಬೇಕಾದ ಆದ್ಯತೆ ದೊರಕಿಲ್ಲ.

ತುಮಕೂರುಜಿಲ್ಲೆಯ ಹೈನುಗಾರಿಕೆ ಮತ್ತು ತೆಂಗು ಬೆಳೆಗೆ ಕಾಯಕಲ್ಪ ಮಾಡಬೇಕಾಗಿದೆ. ತೆಂಗಿಗೆ ನ್ಯಾಯೋಚಿತ ಬೆಲೆಯನ್ನು ಕೊಡಿಸಬೇಕಾಗಿದೆ.

ಈ ಪಟ್ಟಿ ಇನ್ನು ಬೆಳೆಯುತ್ತಾ ಹೋಗಬಹುದು. ಇದೀಗ ಲೋಕಸಭಾ ಸದಸ್ಯರಾಗಿ ಮತ್ತು ಸಚಿವರಾಗಿರುವ ಮಾನ್ಯ ಸೋಮಣ್ಣ ಅವರು ಅತ್ಯುತ್ತಮ ಕೆಲಸಗಾರರು ಎಂದು ಖ್ಯಾತವಾಗಿರುವ ಕಾರಣಕ್ಕಾಗಿ ಈ ವಿಚಾರಗಳನ್ನು ಪ್ರಸ್ತಾಪಿಸಿದೆ. ಇನ್ನು ಮುಂದೆ ಅವರೇ ಹೊಸ ಕ್ಷೇತ್ರದಲ್ಲಿ ತುಮಕೂರಿನ ನಾಗರಿಕರಿಗೆ ಉತ್ತಮ ಕೊಡುಗೆಗಳನ್ನು ಕೊಡುತ್ತಾರೆ ಎಂದು ನಿರೀಕ್ಷಿಸಬಹುದು.

**ಸೇವೆ ಯಾರಿಗೆ ಮಾಡಬೇಕು**

"ಸರ್ಕಾರದ ಸೇವೆ ಸಲ್ಲಬೇಕಾದದ್ದು ಮುಖ್ಯವಾಗಿ ಅವಕಾಶದಿಂದ ವಂಚಿತರಾದ ಜನರಿಗೆ. ಇದು ದಾನಧರ್ಮದ ವಿಚಾರವಲ್ಲ. ಆಡಳಿತ ವ್ಯವಸ್ಥೆಯ ಭಾಗವಾಗಿರುವವರು ಮಾಡಬೇಕಾದ ಕರ್ತವ್ಯ" ಎನ್ನುವ ಚಿಂತಕರಾದ ಪ್ರೊ. ಎ. ಎನ್. ಮೂರ್ತಿರಾಯರ ಮಾತು ಈ ಸಂದರ್ಭದಲ್ಲಿ ನೆನಪಿಗೆ ಅರ್ಹವಾಗಿದೆ. ಭಕ್ತಿಭಂಡಾರಿ ಬಸವಣ್ಣನವರ ಆರಾಧಕರಾಗಿರುವ ಸಚಿವರಾದ ಮಾನ್ಯ ಸೋಮಣ್ಣ ಅವರು ತಮ್ಮ ಲೋಕಸಭಾ ಅವಧಿಯನ್ನು ದಾಖಲಾರ್ಹ ಕಾಲವನ್ನಾಗಿಸುತ್ತಾರೆ ಎಂದು ನಿರೀಕ್ಷಿಸಬಹುದು. ಅವರಿಗೆ ಜಿಲ್ಲೆಯ ಎಲ್ಲ ನಾಗರಿಕರ ಪರವಾಗಿ ಮತ್ತೊಮ್ಮೆ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತೇನೆ.

▪ ನಿರೂಪಣೆ: ಶ್ರೀವತ್ಸ

(ಆಕರ: ವಿಜಯಪಥ, ವಿ.ಸೋಮಣ್ಣ ಅವರ ಅಭಿನಂದನ ಗ್ರಂಥ. ಸಂಪಾದಕರು: ಡಾ.ಬೈರಮಂಗಲ ರಾಮೇಗೌಡ ಮತ್ತು ಫಾಲನೇತ್ರ)

**ಶ್ರೀದೇವಿ ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ**

# ನರ್ಸಿಂಗ್ ಕ್ಷೇತ್ರದಲ್ಲಿರುವವರು ನಾಯಕತ್ವ ಮತ್ತು ಸೇವಾ ಗುಣ ಬೆಳೆಸಿಕೊಳ್ಳಬೇಕು

"ನರ್ಸಿಂಗ್ ಕ್ಷೇತ್ರದಲ್ಲಿ ಶುಶ್ರೂಷಕರಾಗಲು ಬಯಸುವವರು ನಾಯಕತ್ವ ಮತ್ತು ಸೇವಾ ಗುಣಗಳನ್ನು ಬೆಳೆಸಿಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ನರ್ಸ್‌ಗಳು ಆಧಾರಸ್ತಂಭದಂತೆ ಕೆಲಸ ಮಾಡುತ್ತಾರೆ. ಅವರು ಈ ಕ್ಷೇತ್ರದ ಅಮೂಲ್ಯ ಆಸ್ತಿ. ಹಿಂದೆ ಮಹಿಳೆಯರು ಆಸ್ಪತ್ರೆಗೆ ಬರುತ್ತಿರಲಿಲ್ಲ. ನರ್ಸ್‌ಗಳು ಬಂದ ನಂತರ ಮಹಿಳೆಯರ ಪ್ರವೇಶ ಹೆಚ್ಚಾಯಿತು. ವೃತ್ತಿ ಜೀವನದಲ್ಲಿ ಸೇವಾ ಮನೋಭಾವ ಬೆಳೆಸಿಕೊಂಡರೆ ಉತ್ತಮ ಶುಶ್ರೂಷಕರಾಗಲು ಸಾಧ್ಯವಿದೆ. ಇಂದಿಗೂ ನರ್ಸ್‌ಗಳ ಮಹತ್ವ ಕಡಿಮೆಯಾಗಿಲ್ಲ. ಅವರು ಎಲ್ಲಾ ಆಸ್ಪತ್ರೆಗಳ ಕೇಂದ್ರ ಬಿಂದುಗಳು" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ 'ಅಂತರಾಷ್ಟ್ರೀಯ ವಿಶ್ವ ಶುಶ್ರೂಷಕರ ದಿನಾಚರಣೆ' ಯನ್ನು ಮೇ 30 ರಂದು ಹಮ್ಮಿಕೊಂಡಾಗ ಅದರಲ್ಲಿ ಭಾಗವಹಿಸಿ ಶ್ರೀಯುತರು ಮಾತನಾಡುತ್ತಾ ಮೇಲಿನ ವಿಚಾರವನ್ನು ಹೇಳಿದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್‌ರವರು ಮಾತನಾಡುತ್ತಾ "ನರ್ಸಿಂಗ್ ಕ್ಷೇತ್ರದಲ್ಲಿರುವವರು ಹೆಚ್ಚು ಹೆಚ್ಚು ಕಲಿಕಾ ಪ್ರಯೋಗಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಜೀವನದಲ್ಲಿ ಲಭಿಸುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ನರ್ಸಿಂಗ್ ವಿದ್ಯಾರ್ಥಿಗಳು ಆಸ್ಪತ್ರೆಯ ಹೃದಯಭಾಗವಾಗಿದ್ದಾರೆ. ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯ 850 ಹಾಸಿಗೆಗಳನ್ನು ಹೊಂದಿದೆ. ಅತ್ಯುತ್ತಮ ಹಾಗು ಅನುಭವವುಳ್ಳ ವೈದ್ಯರು ಶ್ರೀದೇವಿ ಆಸ್ಪತ್ರೆಯಲ್ಲಿದ್ದಾರೆ" ಎಂದರು.



ಅಂತಾರಾಷ್ಟ್ರೀಯ ನರ್ಸಿಂಗ್ ದಿನಾಚರಣೆಯ ಸಂದರ್ಭದಲ್ಲಿ ಶ್ರೀದೇವಿ ಆಸ್ಪತ್ರೆಯಲ್ಲಿ ಉಪ ಶುಶ್ರೂಕ ಅಧೀಕ್ಷರಾಗಿರುವ ಶ್ರೀನರಸಪ್ಪ ಅವರಿಗೆ ಸೇವಾದಕ್ಷತೆಗೆ ಸನ್ಮಾನ. ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್.ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಎಂ.ಎಸ್. ಪಾಟೀಲ್ ಪ್ರೊ.ಎಸ್. ಉಷಾ ಪ್ರೊ.ಆರ್.ಕೆ. ಮುನಿಸ್ವಾಮಿ, ಡಾ.ಕೆ. ಮೋಹನ್‌ಕುಮಾರ್, ಡಾ. ಚೆನ್ನಮಲ್ಲಯ್ಯ ಮತ್ತು ಶೀಲಾ.

ಇದೇ ಸಂದರ್ಭದಲ್ಲಿ ಶ್ರೀದುರ್ಗಾಂಬಿಕಾ ದೇವಿಯ ಮಾನ್ಯೇಜಿಂಗ್ ಟ್ರಸ್ಟಿಯಾದ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ನೇತ್ರತಜ್ಞರಾದ ಡಾ. ಲಾವಣ್ಯ, ಶ್ರೀದೇವಿ ಛಾರಿಟಬಲ್ ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ ಅವರು ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯ ಸಂದರ್ಭದಲ್ಲಿ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ಉಷಾ ಅವರು 'ಪ್ರಸ್ತುತ ಆರೋಗ್ಯದ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತಿದ್ದು, ನರ್ಸಿಂಗ್ ಕ್ಷೇತ್ರದಲ್ಲಿ ಉತ್ತಮ ಶುಶ್ರೂಷಕರಾಗಲು ಅಗತ್ಯವಾದ ಗುಣಗಳನ್ನು ಬೆಳೆಸಿಕೊಳ್ಳಬೇಕು' ಎಂದರು. ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಆರ್.ಕೆ. ಮುನಿಸ್ವಾಮಿರವರು 'ಶುಶ್ರೂಷಕರು ಆಸ್ಪತ್ರೆಗೆ ಬರುವ ಪ್ರತಿಯೊಬ್ಬರನ್ನು ಮಾನವೀಯತೆಯಿಂದ ಉಪಚರಿಸಬೇಕು' ಎಂದರು. ಶ್ರೀದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಡಾ.ಅಂಬಾ ಅವರು "ವೈದ್ಯರು ಹಾಗೂ ರೋಗಿಗಳ ಮಧ್ಯೆ ಶುಶ್ರೂಷಕರು ಸೇತುವೆಯಾಗಿ ಕಾರ್ಯನಿರ್ವಹಿಸಬೇಕು" ಎಂದರು.

ಕಾರ್ಯಕ್ರಮದಲ್ಲಿ ಶ್ರೀದುಗಾಂಬಾ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಡಾ.ಅಂಬಾ, ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್. ಉಷಾ ಮತ್ತು ಶ್ರೀದೇವಿ ಆಸ್ಪತ್ರೆಯ ಉಪ ಅಧೀಕ್ಷಕರಾದ ನರಸಪ್ಪ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಉಪ ಅಧೀಕ್ಷಕರಾದ ಡಾ.ಚೆನ್ನಮಲ್ಲಯ್ಯ, ಶ್ರೀದೇವಿ ಆಸ್ಪತ್ರೆಯ ಶುಶ್ರೂಷಕ ಅಧೀಕ್ಷಕರಾದ ಶೀಲಾ, ಮತ್ತು ಶ್ರೀದೇವಿ ಆಸ್ಪತ್ರೆಯ ಉಪ ಅಧೀಕ್ಷಕರಾದ ನರಸಪ್ಪ ಅವರುಗಳು ಭಾಗವಹಿಸಿದ್ದರು. ಶ್ರೀನರಸಪ್ಪ ಅವರಿಗೆ ನರ್ಸಿಂಗ್ ಕ್ಷೇತ್ರದಲ್ಲಿ ಅವರ ಸೇವೆಯನ್ನು ಪರಿಗಣಿಸಿ ಸನ್ಮಾನ ಮಾಡಲಾಯಿತು.

▪ ವರದಿ: ಎನ್. ಆನಂದ

## ಫಿಜಿಯೋಥೆರಪಿಸ್ಟ್ ಪ್ರತಿಭಾವಂತ ಅಧ್ಯಯನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ

# ಕು. ಸುಧಾ ನಾರಾಯಣಪ್ಪ ಜಯಮ್ಮರವರ ಪ್ರತಿಭಾ ಪುರಸ್ಕಾರ

▪ ಎನ್. ಭಾರತಿ

ಸಮಾರಂಭ ಜೂನ್ 1ರಂದು ನಡೆಯಿತು. ಪ್ರಶಸ್ತಿ ಪುರಸ್ಕೃತರಿಗೆ ತಲಾ 10 ಸಾವಿರ ನಗದು ಬಹುಮಾನ, ಪ್ರಮಾಣಪತ್ರದ ಜೊತೆಗೆ ಶಾಲು ಹೊದಿಸಿ ಸನ್ಮಾನ ಮಾಡಲಾಯಿತು. ಶ್ರೀದೇವಿ ಫಿಜಿಯೋಥೆರಪಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಕೆ.ಎ.ಆನಂದಿ ಅವರು ಸ್ವಾಗತ ಮಾಡಿದರು. ಕೊನೆಯಲ್ಲಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ವಂದನೆ ಹೇಳಿದರು. ಕಾರ್ಯಕ್ರಮವನ್ನು ಪ್ರೊ. ಹಿಮಬಿಂದು ಅವರು ನಿರೂಪಿಸಿದರು. ಪ್ರಾರಂಭದಲ್ಲಿ ಫಿಜಿಯೋಥೆರಪಿಯಲ್ಲಿ ಎರಡನೆಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಕುಮಾರಿ ಮಿಕ ಅವರು ಪ್ರಾರ್ಥನೆ ಸಲ್ಲಿಸಿದ್ದರು.

ಇದೇ ಸಂದರ್ಭದಲ್ಲಿ 2023 ಹಾಗು 2024ರ ಫಿಜಿಯೋಥೆರಪಿ ಅಧ್ಯಯನಕ್ಕೆ ಸೇರಿರುವ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಅವರಿಗೆ ಪ್ರೊ. ಹಿಮಬಿಂದು ಅವರು ವೃತ್ತಿಮಹತ್ವವನ್ನು ಕುರಿತಾದ ಪ್ರಮಾಣವಚನವನ್ನು ಬೋಧಿಸಿದರು.

ಈ ಸಮಾರಂಭದಲ್ಲಿ ಡಾ.ಎನ್.ನಾರಾಯಣಪ್ಪ, ಶ್ರೀಮತಿ ಜಯಮ್ಮ ನಾರಾಯಣಪ್ಪ, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಫಿಜಿಯೋಥೆರಪಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಕೆ.ಎ.ಆನಂದಿ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಉದ್ಯಮಿ ಶ್ರೀಮತಿ ಆಶಾಪ್ರಸನ್ನಕುಮಾರ್, ಭಾರತಿಕಮಲೇಶ್, ಶಿವಶಂಕರ್, ಪ್ರಜಾಪ್ರಗತಿ ದಿನಪತ್ರಿಕೆಯ ಸಂಪಾದಕರಾದ ಎಸ್.ನಾಗಣ್ಣ ನಾರಾಯಣಪ್ಪ ಅವರ ಮಗಳು ಶ್ರೀಮತಿ ಉಷಾಲೋಕೇಶ, ಲೋಕೇಶ್, ಮಗು ಮಂಜುನಾಥ ಮತ್ತು ಸೊಸೆ ಶ್ರೀಮತಿ ಭಾಗ್ಯ ಮಂಜುನಾಥ್ ಅವರುಗಳು ಭಾಗವಹಿಸಿದ್ದರು.


ದಿವಂಗತ ಕು.ಸುಧಾ ಅವರಿಗೆ ಗಣ್ಯರಿಂದ ಪುಷ್ಪ ನಮನ.

### ಫಿಜಿಯೋಥೆರಪಿ ಒಂದು ಪರಿಚಯ


ಫಿಜಿಯೋಥೆರಪಿ ಮೂಲತಃ ಮನುಷ್ಯನ ಶಾರೀರಿಕ ಆರೋಗ್ಯವನ್ನು ಕುರಿತು ಚಿಂತಿಸುತ್ತದೆ. ಮನುಷ್ಯನ ಎಲ್ಲಾ ಅವಯವಗಳು ಗರಿಷ್ಠಮಟ್ಟದಲ್ಲಿ ಕೆಲಸ ಮಾಡಿದರೆ ಮಾತ್ರ ಮನುಷ್ಯ ನೋವುಗಳಿಂದ ಮುಕ್ತನಾಗುತ್ತಾನೆ. ಫಿಜಿಯೋಥೆರಪಿಯ ಪಿತಾಮಹನೆಂದು ಭಾರತದಲ್ಲಿ ವೈದ್ಯಕೀಯ ಪರಂಪರೆಗೆ ನಾಂದಿ ಹಾಡಿದ ಸುಶ್ರುತನನ್ನು ನೆನೆಬಹುದು.

ಪಾಶ್ಚಾತ್ಯ ದೇಶದಲ್ಲಿ ಕ್ರಿ.ಪೂ. 460ರಲ್ಲಿದ್ದ ಹಿಪ್ಪೋಕ್ರೇಟ್ಸ್ ಮತ್ತು ಗ್ಯಾಲೆನ್‌ನಂತಹ ವೈದ್ಯರು ದೈಹಿಕ ಚಿಕಿತ್ಸೆಯ ಮಹತ್ವವನ್ನು ಕಂಡುಕೊಂಡರು. 1927ರಲ್ಲಿ ಮೇರಿ ಮೆಕ್‌ಮಿಲನ್ ಅವರು ಅಮೆರಿಕದಲ್ಲಿ 'ಅಮೆರಿಕ ಫಿಜಿಯೋಥೆರಪಿ ಅಸೋಸಿಯೇಷನ್' ಸ್ಥಾಪನೆಗೆ ಕಾರಣ ಕರ್ತರೆನಿಸಿದ್ದಾರೆ. 1952ರಲ್ಲಿ ಮುಂಬೈನ ಆಸ್ಪತ್ರೆಯಲ್ಲಿ ಫಿಜಿಯೋಥೆರಪಿ ವಿಭಾಗ ಪ್ರಾರಂಭವಾಯಿತು. ನಂತರ ವರ್ಷದಲ್ಲೇ ಫಿಜಿಯೋಥೆರಪಿ ಶಾಲೆ ಸಹ ಆರಂಭಗೊಂಡಿತ್ತು. ಭಾರತ ಸರ್ಕಾರ ಮತ್ತು ವಿಶ್ವ ಆರೋಗ್ಯ ಸಂಸ್ಥೆ ಫಿಜಿಯೋಥೆರಪಿ ಕೋರ್ಸ್‌ಗಳನ್ನು ನಿರಂತರವಾಗಿ ಪ್ರೋತ್ಸಾಹಿಸುತ್ತಿವೆ. ಆಧುನಿಕ ವೈದ್ಯಕೀಯ ಶಾಸ್ತ್ರದಲ್ಲಿ ಫಿಜಿಯೋಥೆರಪಿಗೆ ವಿಶೇಷವಾದ ಸ್ಥಾನವಿದೆ. ಹೃದಯ, ಶ್ವಾಸಕೋಶ, ಪಾರ್ಶ್ವವಾಯು, ನ್ಯೂರೋ, ನೇತ್ರ ಮತ್ತು ಆರ್ಥೋ ಮೊದಲಾದ ವೈದ್ಯಶಾಸ್ತ್ರದ ವಿವಿಧ ವಿಚಾರಗಳಿಗೆ ಅನುಗುಣವಾಗ ಫಿಜಿಯೋಥೆರಪಿ ಜ್ಞಾನ ವಿಸ್ತಾರಗೊಂಡಿದೆ.

1996ರಲ್ಲಿ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಯಲ್ಲಿ ಫಿಜಿಯೋಥೆರಪಿ ಕಾಲೇಜ್ ಪ್ರಾರಂಭವಾಗಿದೆ. ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ. ಸಹ ಮಾಡಲು ಅವಕಾಶವಿದೆ.

▪ ಮಾಹಿತಿ: ಎನ್.ಆನಂದ

ಚಿತ್ರಗಳು: ನವ್ಯ ನಾಗಭೂಷಣ


ಫಿಜಿಯೋಥೆರಪಿಸ್ಟ್ ಡಾ.ಎನ್.ನಾರಾಯಣಪ್ಪ ದಂಪತಿಗಳಿಗೆ ಸನ್ಮಾನ.

## ಮನುಷ್ಯಜೀವಿಗೆ ಬದುಕಿರುವ ತನಕ ನೋವು ಕಟ್ಟಿಟ್ಟ ಬುತ್ತಿ: ಡಾ.ಎನ್.ನಾರಾಯಣಪ್ಪ

ಇಂದು ನಮ್ಮ ಕುಟುಂಬದ ಇತಿಹಾಸದಲ್ಲಿ ಮರೆಯಲಾಗದ ದಿನ. ಡಾ.ಹುಲಿನಾಯ್ಕರ್ ಸಾಹೇಬ್ರರು ನಮ್ಮ ಮಗಳು ಎನ್.ಸುಧಾಳಿಗೆ ಪುನರ್ಜನ್ಮ ಕೊಟ್ಟಿದ್ದಾರೆ. ನಮ್ಮ ಸುಧಾ ಇಂದು ಎಲ್ಲರ ಹೃದಯ ಪ್ರವೇಶಿಸಿ ಅಲ್ಲಿ ಚಿರವಾಗಿ ನಿಂತಿರುವುದು ನನಗೂ ಮತ್ತು ನನ್ನ ಮಡದಿ ಜಯಮ್ಮ ಅವರಿಗೂ ಹೇಳಲಾಗದ ಸಂತೃಪ್ತಿ ದೊರಕಿದೆ. ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇಂದಿನ ಸಮಾರಂಭಕ್ಕೆ ಮಾನ್ಯ ಪಿ.ಜಿ.ಆರ್. ಸಿಂಧ್ಯ ಸಾಹೇಬರು ಬಂದಿರುವುದು ನಮ್ಮ ಪುಣ್ಯ. ಅವರಿಗೆ ಕೃತಜ್ಞತೆಗಳು. ಕಾಲೇಜಿನ ಪ್ರಾಂಶುಪಾಲರಾದ ಡಾ.ಆನಂದಿ ಮತ್ತು ನಮ್ಮ ಕುಟುಂಬದ ಆತ್ಮೀಯರಾದ ಡಾ.ಕೆ.ಆರ್. ಕಮಲೇಶ್ ಮತ್ತು ಅವರ ಮಡದಿ ಭಾರತಿ ಅವರ ಸಹಕಾರ ತುಂಬಾ ಮುಖ್ಯವಾಗಿದೆ. ಅವರ ಸಹಕಾರಕ್ಕೆ ವಂದನೆಗಳು.

ಕೊನೆಯದಾಗಿ ಇಲ್ಲಿರುವ ಫಿಜಿಯೋಥೆರಪಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಬಯಸುತ್ತೇನೆ. ನಾನು 33 ವರ್ಷ ಫಿಜಿಯೋಥೆರಸ್ಟ್ ಆಗಿ ಕೆಲಸ ಮಾಡಿದ್ದೇನೆ. ದೂರದ ಬೀದರ್‌ನಿಂದ ತುಮಕೂರುವರೆಗೂ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿತ್ತು. ಅದೇ ರೀತಿ 19 ವರ್ಷ ಕಾಲ ಫಿಜಿಯೋಥೆರಪಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದ್ದೇನೆ. ನಮ್ಮ ಕಾಲದಲ್ಲಿ ಫಿಜಿಯೋಥೆರಪಿ ಎಂದರೆ ಯಾರಿಗೂ ಗೊತ್ತಿರಲಿಲ್ಲ. ನಮ್ಮ ಕೆಲಸದಿಂದ ಜನರು ನಮ್ಮನ್ನು ಗುರುತಿಸುತ್ತಿದ್ದರು.

ಮನುಷ್ಯಜೀವಿ ಈ ಲೋಕದಲ್ಲಿರುವ ತನಕ ಅವನ ಶರೀರಕ್ಕೆ ನೋವು ಎನ್ನುವುದು ಕಟ್ಟಿಟ್ಟ ಬುತ್ತಿ. ಒಬ್ಬ ವ್ಯಕ್ತಿಯ ನೋವನ್ನು ನಿವಾರಣೆ ಮಾಡಿದರೆ ಆತ ನಿಮ್ಮನ್ನು ಮನಃಪೂರ್ವಕವಾಗಿ ಹರಸುತ್ತಾನೆ. ಪಾರ್ಶ್ವವಾಯು, (ಸ್ಟ್ರೋಕ್) ಪಾರ್ಕಿನ್‌ಸನ್ ಮತ್ತು ವಿವಿಧ ರೀತಿಯ ಅಪಘಾತಗಳಿಂದ ಶರೀರಕ್ಕೆ ಆಗಿರುವ ಹಾನಿಯನ್ನು ತಡೆಗಟ್ಟುವುದು ಹಾಗೂ ಪುನಶ್ಚೇತನ ಮಾಡುವುದು ಫಿಜಿಯೋಥರೆಪಿ ಉದ್ದೇಶ. ಜೊತೆಗೆ ದೇಹದ ಫಿಟ್‌ನೆಸ್‌ಗೆ ಆದ್ಯತೆ ಕೊಡುವುದು. ಅಂತಹ ಪವಿತ್ರವೃತ್ತಿ ಫಿಜಿಯೋಥೆರಪಿ. ನಿಮ್ಮನ್ನು ಆ ವೃತ್ತಿಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳಿ. ಆಗ ನಿಮ್ಮ ಬದುಕು ಸಾರ್ಥಕವಾಗುತ್ತದೆ.

**ಡಾ.ಎನ್.ನಾರಾಯಣಪ್ಪ ಅವರ ಲಿಖಿತ ಭಾಷಣವನ್ನು ಡಾ.ಕೆ.ಆರ್.ಕಮಲೇಶ್ ವಾಚನ ಮಾಡಿದರು.**

## ಪರಿಚಯ

### ಸೇವಾ ಪುರಸ್ಕಾರ: ಡಾ.ಎನ್.ನಾರಾಯಣಪ್ಪ

ಡಾ.ಎನ್.ನಾರಾಯಣಪ್ಪ ಅವರು ಐವತ್ತು ವರ್ಷಗಳ ಕಾಲ ಫಿಜಿಯೋಥೆರಪಿ ಕ್ಷೇತ್ರದಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಮೂರು ದಶಕಗಳ ಕಾಲ ಸರ್ಕಾರದ ಆಸ್ಪತ್ರೆಗಳಲ್ಲಿ ಫಿಜಿಯೋಥೆರಪಿಸ್ಟ್ ಆಗಿ ಸಲ್ಲಿಸಿದ ಸೇವೆ ರೋಗಿಗಳ ದೃಷ್ಟಿಯಲ್ಲಿ ಅಮೂಲ್ಯವಾದದ್ದು. ಡಾ.ನಾರಾಯಣಪ್ಪ ಅವರು ಫಿಜಿಯೋಥೆರಪಿ ಚಿಕಿತ್ಸಾಕ್ಷೇತ್ರದಲ್ಲಿ ವಿನೂತನ ಪದ್ಧತಿಯ ಆವಿಷ್ಕಾರಕ್ಕೆ ಕಾರಣಕರ್ತರಾಗಿದ್ದಾರೆ. ಫಿಜಿಯೋಥೆರಪಿ ಚಿಕಿತ್ಸೆಯಲ್ಲಿ ಯೋಗವನ್ನು ಸಮರ್ಥವಾಗಿ ಬೆರೆಸುವುದರ ಮೂಲಕ ಈ ಚಿಕಿತ್ಸಾಪದ್ಧತಿಗೆ ಭಾರತೀಯತೆಯ ಲೇಪನ ಕೊಟ್ಟಿದ್ದಾರೆ.

ಬೆಂಗಳೂರಿನ ಕೆಂಪೇಗೌಡ ಮೆಡಿಕಲ್ ಕಾಲೇಜು ಮತ್ತು ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಸಾಗರ್ ಆಸ್ಪತ್ರೆಗಳಲ್ಲಿ ಫಿಜಿಯೋಥೆರಪಿ ವಿಭಾಗವನ್ನು ಕಟ್ಟಿ ಬೆಳಸಿದ ಕೀರ್ತಿ ಡಾ.ಎನ್.ನಾರಾಯಣಪ್ಪ ಅವರದು. 86 ವರ್ಷದ ಡಾ. ಎನ್. ನಾರಾಯಣಪ್ಪ ಅವರು ಈಗಲೂ ಅರ್ಹ ರೋಗಿಗಳಿಗೆ ಫಿಜಿಯೋಥೆರಪಿ ಚಿಕಿತ್ಸೆ ನೀಡುತ್ತಿದ್ದಾರೆ. ಫಿಜಿಯೋಥೆರಪಿ ವಿಭಾಗದಲ್ಲಿ ವಿಶೇಷ ಸಾಧನೆ ಮಾಡಿದ ವ್ಯಕ್ತಿಗಳಿಗೆ 'ಫಿಜಿಯೋಥೆರಪಿಸ್ಟ್ ನಾರಾಯಣಪ್ಪ ಜಯಮ್ಮ ಸೇವಾಪುರಸ್ಕಾರ'ವನ್ನು ನೀಡಲಾಗುತ್ತಿದೆ.

### ಪ್ರತಿಭಾ ಪುರಸ್ಕಾರ: ದಿವಂಗತ ಕುಮಾರಿ ಎನ್. ಸುಧಾ



ಡಾ.ಎನ್.ನಾರಾಯಣಪ್ಪ ಮತ್ತು ಜಯಮ್ಮ ದಂಪತಿಗಳ ಮಗಳಾದ ದಿವಂಗತ ಕುಮಾರಿ ಎನ್. ಸುಧಾ (ಜನನ 3.2.1974–ಮರಣ 13.5.2022) ಅವರದು ತ್ಯಾಗಮಯ ಜೀವನ. ಬದುಕಿನಲ್ಲಿ ಬಂದ ಕೊರತೆಗಳನ್ನೇ ಸಾಧನೆಯ ಮೆಟ್ಟಿಲಾಗಿ ಉಪಯೋಗಿಸಿಕೊಂಡ ಛಲಗಾರ್ತಿ. ಹುಟ್ಟಿನಿಂದಲೇ ಅನಾರೋಗ್ಯದ ನಡುವೆ ಬೆಳೆದ ಕುಮಾರಿ ಸುಧಾ ಅವರು ಬಿ.ಎಸ್ಸಿ. ಎಂ.ಬಿ.ಎ., ಎಂ.ಸಿ.ಎ ಹಾಗೂ ಜನರೆಟಿಕ್ ಕಂಪ್ಯೂಟರ್‌ನಲ್ಲಿ ಪದವಿಗಳನ್ನು ಗಳಿಸಿದ್ದರು. ತಮ್ಮ ಸುಸಂಸ್ಕೃತ ನಡವಳಿಕೆಯಿಂದ ಅವರು ಎಲ್ಲರಿಗೂ ಬೇಕಾದವರಾಗಿದ್ದರು.

ಮನೆಯಲ್ಲಿ ಮಕ್ಕಳಿಗೆ ನಿರಂತರವಾಗಿ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್‌ಗಳನ್ನು ಬೋಧಿಸುತ್ತಿದ್ದ ಕುಮಾರಿ ಸುಧಾ ಅನೇಕ ಮಕ್ಕಳ ಬಾಳಿಗೆ ಬೆಳಕು ಆಗಿದ್ದಾರೆ. ಅವರು ತಮ್ಮ ತಂದೆ ಫಿಜಿಯೋಥೆರಪಿ ರೋಗಿಗಳು ನೀಡುತ್ತಿದ್ದ ಚಿಕಿತ್ಸೆಗೆ ಸಹಾಯ ಮಾಡುತ್ತಿದ್ದರು. ಡಾ.ಎನ್.ನಾರಾಯಣಪ್ಪ–ಜಯಮ್ಮ ದಂಪತಿಗಳು ಕುಮಾರಿ ಸುಧಾ ಅವರ ದುಡಿಮೆಯನ್ನು ಶ್ರೀದೇವಿ ಫಿಜಿಯೋಥೆರಪಿ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ\ವಿದ್ಯಾರ್ಥಿನಿಯರು ಮತ್ತು ಸೇವಾಮನೋಭಾವವುಳ್ಳ ಫಿಜಿಯೋಥೆರಪಿಸ್ಟ್‌ಗಳಿಗೆ ನಗದು ಬಹುಮಾನ ನೀಡಿ ಸನ್ಮಾನ ಮಾಡಲು ಇಡುಗಂಟನ್ನು ನೀಡಿದ್ದಾರೆ. ತ್ಯಾಗಮಯಿ ಮತ್ತು ನಿರಂತರ ಪ್ರಯತ್ನಶೀಲೆಯಾಗಿದ್ದ ಕುಮಾರಿ ಎನ್. ಸುಧಾ ಅವರ ಬದುಕು, ಫಿಜಿಯೋಥೆರಪಿ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎನ್ನುವವರಿಗೆ ನಿರಂತರವಾಗಿ ಪ್ರೇರಣೆಯಾಗಬಲ್ಲದು.


ಫಿಜಿಯೋಥೆರಪಿ ಕ್ಲಿನಿಕ್

# ಕು. ಸುಧಾ ನಾರಾಯಣಪ್ಪ ಜಯಮ್ಮರವರ ಪ್ರತಿಭಾ ಪುರಸ್ಕಾರ

## ಪ್ರಶಸ್ತಿ ಪುರಸ್ಕೃತರು



### ಡಾ.ಸೈಯದಾ ಮುಬಶೀರಾ

ಡಾ.ಸೈಯದಾ ಮುಬಶೀರಾ ಅವರು (Dr.Syeda MubaShira) ಫ಼ಿಜಿಯೋಥೆರಪಿ ಕ್ಷೇತ್ರದಲ್ಲಿ ತಮ್ಮ ಕೆಲಸ ಹಾಗೂ ಸಂಶೋಧನೆಯಿಂದಾಗಿ ಈ ಕ್ಷೇತ್ರದ ಕ್ರಿಯಾಶೀಲ ನಾಯಕರೆನಿಸಿದ್ದಾರೆ. ಅವರು Tail bone(coccyx), ಗರ್ಭಿಣಿ ಹೆರಿಗೆಪೂರ್ವ ಮತ್ತು ಹೆರಿಗೆಯ ನಂತರ, ನ್ಯೂರೋ ಹಾಗೂ ಕಾರ್ಡಿಯಾಲಜಿ ಕ್ಷೇತ್ರದಲ್ಲಿ ಫ಼ಿಜಿಯೋಥೆರಪಿಯ ಮಹತ್ವವನ್ನು ತಮ್ಮ ಚಿಕಿತ್ಸೆಯಿಂದ ನಿರೂಪಿಸಿದ್ದಾರೆ. ಡಾ. ಸೈಯದಾ ಮುಬಶೀರಾ ಅವರು ರಾಜ್ಯ ಮತ್ತು ರಾಷ್ಟ್ರದ ವಿವಿಧ ಆರೋಗ್ಯಸಂಸ್ಥೆಗಳಲ್ಲಿ ಕೆಲಸಮಾಡಿ ಅಪಾರ ಅನುಭವ ಗಳಿಸಿದ್ದಾರೆ. ಶ್ರೀದೇವಿ ಫ಼ಿಜಿಯೋಥೆರಪಿ ಕಾಲೇಜ್‌ನಲ್ಲಿ ಪದವಿ ಮತ್ತು ಸ್ನಾತಕೋತ್ತರಪದವಿ ಗಳನ್ನು ಪಡೆದಿದ್ದಾರೆ. ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿರುವ ಡಾ.ಸೈಯದಾ ಮುಬಶೀರಾ ಅವರು ರಾಷ್ಟ್ರೀಯ ಮಾನ್ಯತೆ ಗಳಿಸಿರುವುದು ನಮಗೆ ಹೆಮ್ಮೆಯ ವಿಚಾರ. ಅವರನ್ನು ಮನಃಪೂರ್ವಕವಾಗಿ ಅಭಿನಂದಿಸಿ 2024ರ ಸಾಲಿನ **‘ಫ಼ಿಜಿಯೋಥೆರಪಿಸ್ಟ್ ನಾರಾಯಣಪ್ಪ ಜಯಮ್ಮ ಸೇವಾ ಪುರಸ್ಕಾರ’** ನೀಡಲು ನಮಗೆ ಹರ್ಷವೆನಿಸಿದೆ.

ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಜೂನ್ 1 ರಂದು ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿಪಡೆದು ಮಾತನಾಡಿದ ಸೈಯದಾ ಮುಬಾಶೀರಾ ಅವರು “ನನಗೆ ಇಂದು ತುಂಬಾ ಸಂತೋಷ ಎನಿಸಿದೆ. ನಾನು 2002 ಮತ್ತು 2007ರಲ್ಲಿ ಶ್ರೀದೇವಿ ಫ಼ಿಜಿಯೋಥೆರಪಿ ಕಾಲೇಜಿನಿಂದ ಫ಼ಿಜಿಯೋಥೆರಪಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದೆ. ನಾನು ಇಲ್ಲಿಗೆ ಬಂದ ಮೇಲೆ ಹಿಂದಿನ ಅಧ್ಯಾಪಕವೃಂದವಿದೆಯೇ ಎಂಬುದನ್ನು ನೋಡಿದೆ. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಡಾ.ಹುಲಿನಾಯ್ಕರ್ ಸರ್ ಬಗ್ಗೆ ಹೇಳಬೇಕು. ಅವರು ನಮ್ಮ ತಂದೆಯವರ ಸ್ನೇಹಿತರು. ನಾನು ಈ ಸ್ಥಾನಕ್ಕೆ ಬರಲು ಅವರ ನೆರವು ಮತ್ತು ಮಾರ್ಗದರ್ಶನ ತುಂಬಾ ಮುಖ್ಯವಾಗಿರುವಂತಹುದು. ಅವರು ಎಲ್ಲಾ ವಿದ್ಯಾರ್ಥಿಗಳಿಗೂ ಹೀಗೆ ಸಹಾಯ ಮಾಡುತ್ತಾರೆ. ಅದನ್ನು ಇಲ್ಲಿರುವ ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು. ಫ಼ಿಜಿಯೋಥೆರಪಿ ಅದ್ಭುತವಾದ ಅರೆ ವೈದ್ಯಕೀಯಶಾಸ್ತ್ರ. ಈ ಕ್ಷೇತ್ರದಲ್ಲಿ ಆಸಕ್ತಿಯಿರುವವರು ಆಕಾಶದತ್ತ ಎತ್ತರಕ್ಕೆ ಬೆಳೆಯಲು ಅವಕಾಶವಿದೆ.

ಈ ಸಂದರ್ಭದಲ್ಲಿ ಫ಼ಿಜಿಯೋಥೆರಪಿಸ್ಟ್‌ಗಳನ್ನು ಗುರುತಿಸಿ ಸನ್ಮಾನಿಸಲು ದತ್ತಿ ಸ್ಥಾಪಿಸಿರುವ ಫ಼ಿಜಿಯೋಥೆರಪಿಸ್ಟ್ ಡಾ.ಎನ್.ನಾರಾಯಣಪ್ಪ ಮತ್ತು ಜಯಮ್ಮ ನಾರಾಯಣಪ್ಪ ಅವರನ್ನು ಅಭಿನಂದಿಸುತ್ತೇನೆ. ಅವರು ಸ್ಥಾಪಿಸಿರುವ ಮೊದಲ ಪ್ರಶಸ್ತಿ ನನಗೆ ಬಂದಿರುವುದು ನನ್ನ ಭಾಗ್ಯ. ಇದಕ್ಕೆ ಕಾರಣರಾರ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮುಂದಿನ ನನ್ನ ವೃತ್ತಿಜೀವನದಲ್ಲಿ ಮತ್ತಷ್ಟು ಸಾಧನೆ ಮಾಡಲು ನನಗೆ ಈ ಪ್ರಶಸ್ತಿ ಪ್ರೇರಣೆ ನೀಡಿದೆ.”



### ಕುಮಾರಿ ತುಬಾ ಆರ್.

ಕುಮಾರಿ ತುಬಾ ಆರ್. (Ms.Tubha. R) ಅವರು ಶ್ರೀದೇವಿ ಫ಼ಿಜಿಯೋಥೆರಪಿ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿಗಾಗಿ ವ್ಯಾಸಂಗ ಮಾಡುತ್ತಿದ್ದಾರೆ. ಅವರ ವಿಶೇಷ ಅಧ್ಯಯನ ವಿಷಯ Musculoskeletal Sciences. (ಮನುಷ್ಯರ ಮೂಳೆ ಮತ್ತು ಮಾಂಸದ ವೈಜ್ಞಾನಿಕ ಅಧ್ಯಯನ). ಫ಼ಿಜಿಯೋಥೆರಪಿಯಲ್ಲಿ ಪದವಿಯನ್ನು ಅತ್ಯುನ್ನತ ಮಟ್ಟದಲ್ಲಿ ಪಡೆದಿರುತ್ತಾರೆ. ಜೊತೆಗೆ ಅರ್ಪಣಾಮನೋಭಾವದಿಂದ ರೋಗಿಗಳಿಗೆ ಫ಼ಿಜಿಯೋಥೆರಪಿ ಸೇವೆಯನ್ನು ನೀಡುತ್ತಿದ್ದಾರೆ. ಯಾವುದೇ ಜವಾಬ್ದಾರಿಯನ್ನು ತೆಗೆದುಕೊಂಡರೂ ಶ್ರದ್ಧೆಯಿಂದ ಅದನ್ನು ನಿರ್ವಹಿಸುವ ಕುಮಾರಿ ತುಬಾ ಆರ್. ಅವರಿಗೆ 2024ರ **‘ಕುಮಾರಿ ಸುಧಾ, ಜಯಮ್ಮ–ನಾರಾಯಣಪ್ಪ ಪ್ರತಿಭಾ ಪುರಸ್ಕಾರ’**ವನ್ನು ನೀಡಲಾಗುತ್ತಿದೆ.

ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಜೂನ್ 1 ರಂದು ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿಪಡೆದು ಮಾತನಾಡಿದ ಆರ್.ತುಬಾ ಅವರು “ನನಗೆ ‘ಕುಮಾರಿ ಸುಧಾ ನಾರಾಯಣಪ್ಪ ಜಯಮ್ಮ ಫ಼ಿಜಿಯೋಥೆರಪಿ ಪ್ರತಿಭಾ ಪುರಸ್ಕಾರ’ ಬಂದಿರುವುದಕ್ಕೆ ಸಂತೋಷವಾಗಿದೆ. ಈ ಪ್ರಶಸ್ತಿಯನ್ನು ನನ್ನ ಪೋಷಕರಿಗೂ ಮತ್ತು ನಾನು ಈ ಹಂತಕ್ಕೆ ತಲುಪಲು ಮಾರ್ಗದರ್ಶನ ಮಾಡಿದ ನಮ್ಮ ಕಾಲೇಜಿನ ಎಲ್ಲಾ ಅಧ್ಯಾಪಕ ವರ್ಗದವರಿಗೆ ಅರ್ಪಿಸುತ್ತೇನೆ. ಅವರ ಬೆಂಬಲದಿಂದ ಈ ಪ್ರಶಸ್ತಿ ನನಗೆ ದೊರಕಿದೆ.

ನಾನು ಕಲಿಯುವುದರಲ್ಲಿ ಆಸಕ್ತಿಯುಳ್ಳವಳು. ಕಲಿಕೆಯೇ ಜೀವನದ ಗುರಿಯಾಗಬೇಕು. ಆಗ ನಾವು ಮಹತ್ವದ ಸಾಧನೆ ಮಾಡಬಹುದು. ನೀವೆಲ್ಲಾ ಹೊಸ ವಿಚಾರಗಳನ್ನು ಕಲಿಯುತ್ತಾ ಬೆಳೆಯರಿ ಎಂದು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ನಮ್ಮ ಫ಼ಿಜಿಯೋಥೆರಪಿ ಕಾಲೇಜಿನಲ್ಲಿ ನಮ್ಮಂತಹ ವಿದ್ಯಾರ್ಥಿಗಳಿಗೆ ದತ್ತಿ ಸ್ಥಾಪಿಸಿರುವ ಡಾ.ಎನ್.ನಾರಾಯಣಪ್ಪ ಮತ್ತು ಜಯಮ್ಮ ನಾರಾಯಣಪ್ಪ ಅವರಿಗೆ ನಾನು ನಮಸ್ಕಾರಗಳನ್ನು ಹೇಳಬಯಸುತ್ತೇನೆ. ಅವರ ಆಶೀರ್ವಾದ ಸದಾ ನಮ್ಮಗಳ ಮೇಲಿರಲಿ”.

### ಕುಮಾರಿ ರೋಜಿನ ಕೆ.ಸಿ.

ಕುಮಾರಿ ರೋಜಿನ ಕೆ.ಸಿ. (Ms Rojina K.C.) ಅವರು ಶ್ರೀದೇವಿ ಫ಼ಿಜಿಯೋಥೆರಪಿ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಇವರಿಗೆ ಕಲಿಯುವುದರಲ್ಲಿ ತುಂಬಾ ಆಸಕ್ತಿಯಿದೆ. ತಮ್ಮ ಕಲಿಕೆಯ ಪ್ರಯೋಜನವನ್ನು ಫ಼ಿಜಿಯೋಥೆರಪಿ ಬಯಸಿ ಬರುವ ರೋಗಿಗಳಿಗೆ ನೀಡಲು ಉತ್ಸುಕರಾಗಿದ್ದಾರೆ. ಅದರಿಂದ ಉತ್ತಮ ಫಲಗಳು ದೊರೆಯುತ್ತಿವೆ. ಮುಂದಿನ ದಿನಗಳಲ್ಲಿ ಕೆ.ಸಿ.ರೋಜಿನ ಅವರು ಮತ್ತಷ್ಟು ಸೇವಾಕಾರ್ಯವನ್ನು ಫ಼ಿಜಿಯೋಥೆರಪಿ ಕ್ಷೇತ್ರದಲ್ಲಿ ಮಾಡಬಹುದು ಎಂದು ನಿರೀಕ್ಷಿಸಬಹುದು. ಕುಮಾರಿ ರೋಜಿನ ಕೆ.ಸಿ. ಅವರಿಗೆ 2024ರ **‘ಕುಮಾರಿ ಸುಧಾ, ಜಯಮ್ಮ–ನಾರಾಯಣಪ್ಪ ಪ್ರತಿಭಾ ಪುರಸ್ಕಾರ’**ವನ್ನು ನೀಡಲಾಗುತ್ತಿದೆ.

ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಜೂನ್ 1 ರಂದು ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿಪಡದು ಮಾತನಾಡಿದ ಕೆ.ಸಿ.ರೋಜಿನಾ ಅವರು “ನಾನು ಮೊದಲಿಗೆ ನಮ್ಮ ಫ಼ಿಜಿಯೋಥೆರಪಿ ಕಾಲೇಜಿನಲ್ಲಿ ಪ್ರತಿಭಾ ಪುರಸ್ಕಾರಕ್ಕೆ ದತ್ತಿ ಸ್ಥಾಪಿಸಿರುವ ಫ಼ಿಜಿಯೋಥೆರಪಿಸ್ಟ್ ಡಾ.ಎನ್.ನಾರಾಯಣಪ್ಪ ಮತ್ತು ಅವರ ಮಡದಿ ಶ್ರೀಮತಿ ಜಯಮ್ಮ ನಾರಾಯಣಪ್ಪ ಅವರನ್ನು ಅಭಿನಂದಿಸಿ, ಧನ್ಯವಾದವನ್ನು ಅರ್ಪಿಸುತ್ತೇನೆ. ಅವರ ಮಗಳು ದಿವಂಗತ ಕುಮಾರಿ ಸುಧಾ ಅವರ ಹೆಸರಿನಲ್ಲಿರುವ ಪ್ರಶಸ್ತಿ ಪಡೆಯುವ ಭಾಗ್ಯ ನನಗೆ ಒದಗಿರುವುದಕ್ಕೆ ನನ್ನ ತಂದೆ, ತಾಯಿಗಳಿಗೆ ಮತ್ತು ಬೋಧನೆ ಮಾಡಿದ ಅಧ್ಯಾಪಕವೃಂದಕ್ಕೆ ವಿಶೇಷವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನನಗೆ ಪ್ರಾಂಶುಪಾಲರಾದ ಪ್ರೊ.ಕೆ.ಎ.ಆನಂದಿ ಮೇಡಂ ಅವರು ಪ್ರತಿ ಹಂತದಲ್ಲೂ ನನಗೆ ಮಾರ್ಗದರ್ಶನ ನೀಡಿದ್ದಾರೆ.

ಎಲ್ಲರೂ ಕನಸು ಕಾಣುವುದು ಸಹಜ. ಅದನ್ನು ವಾಸ್ತವ ಮಾಡಬೇಕಾದರೆ ನಾವು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಯಾರು ಕಷ್ಟಪಟ್ಟು ಕೆಲಸ ಮಾಡುತ್ತಾರೋ ಅವರು ಎಂದು ನಿರಾಶೆ ಅನುಭವಿಸುವುದಿಲ್ಲ. ಅವರಿಗೆ ಒಳ್ಳೆಯ ಪ್ರತಿಫಲ ದೊರೆಯುತ್ತದೆ. ನನ್ನ ವಿಚಾರದಲ್ಲಿ ಅದು ಸತ್ಯವಾಗಿದೆ. ಅದಕ್ಕಾಗಿ ಇಂದು ಫ಼ಿಜಿಯೋಥೆರಪಿ ಕೋರ್ಸ್‌ಗೆ ಸೇರುತ್ತಿರುವ ನನ್ನ ಕಿರಿಯ ಮಿತ್ರರಿಗೆ ಹೇಳುವ ಮಾತೆಂದರೆ ಶ್ರೀದೇವಿ ಫ಼ಿಜಿಯೋಥೆರಪಿ ಕಾಲೇಜಿನಲ್ಲಿ ಎಲ್ಲಾ ಸೌಲಭ್ಯವಿದೆ. ನೀವು ಎಷ್ಟು ಕಷ್ಟುಪಟ್ಟು ವ್ಯಾಸಂಗ ಮಾಡುತ್ತೀರೋ ಅಷ್ಟರಮಟ್ಟಿಗೆ ಬೆಳೆಯಲು ಸಾಧ್ಯವಿದೆ. ನಿಮ್ಮ ಕನಸು ನನಸಾಗಲು ನೀವೇ ಕಷ್ಟಪಟ್ಟು ವ್ಯಾಸಂಗ ಮಾಡಬೇಕು. ಅದರಿಂದ ನಿಮ್ಮ ವ್ಯಕ್ತಿತ್ವ ಬೆಳೆಯುತ್ತದೆ. ಎಲ್ಲರೂ ನಿಮ್ಮನ್ನು ಗುರುತಿಸುತ್ತಾರೆ”.

### ಶ್ರೀ ಅಬ್ದುಲ್ ಮುಕೀತ್

ಶ್ರೀದೇವಿ ಫ಼ಿಜಿಯೋಥೆರಪಿ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ಶ್ರೀ ಅಬ್ದುಲ್ ಮುಕೀತ್(Mr Abdul Muquit) ಅವರು ಆದರ್ಶ ವಿದ್ಯಾರ್ಥಿಗೆ ಬೇಕಾದ ನಡೆ, ನುಡಿಗಳನ್ನು ರೂಢಿಸಿಕೊಂಡಿದ್ದಾರೆ. ಬೆಳಗ್ಗೆ 9 ಗಂಟೆಗೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗುವ ಶ್ರೀಯುತರು ಅತ್ಯಂತ ಶ್ರದ್ಧೆಯಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಯಾವುದೇ ಕೆಲಸವಾದರೂ ಅದನ್ನು ಅಚ್ಚುಕಟ್ಟಾಗಿ ಮಾಡುವ ಗುಣ ಅವರದು. ಕಾಲೇಜಿನ ಎಲ್ಲಾ ಸಭೆ, ಸಮಾರಂಭಗಳಲ್ಲೂ ಸಕ್ರಿಯವಾಗಿ ಭಾಗವಹಿಸುವ ಅವರಲ್ಲಿ ನಾಯಕತ್ವದ ಗುಣ ಅರಳಿರುವುದನ್ನು ಕಾಣಬಹುದು. ಶ್ರೀ ಅಬ್ದುಲ್ ಮುಕೀತ್ ಅವರಿಗೆ 2024ರ **‘ಕುಮಾರಿ ಸುಧಾ, ಜಯಮ್ಮ–ನಾರಾಯಣಪ್ಪ ಪ್ರತಿಭಾ ಪುರಸ್ಕಾರ’**ವನ್ನು ನೀಡಲಾಗುತ್ತಿದೆ.

ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಜೂನ್ 1 ರಂದು ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿಪಡದು ಮಾತನಾಡಿದ ಅಬ್ದುಲ್ ಮುಕೀತ್ ಅವರು “ಫ಼ಿಜಿಯೋಥೆರಪಿಸ್ಟ್ ಡಾ.ಎನ್.ನಾರಾಯಣಪ್ಪ ಮತ್ತು ಜಯಮ್ಮ ನಾರಾಯಣಪ್ಪ ಅವರು ಸ್ಥಾಪಿಸಿರುವ ‘ಕುಮಾರಿ ಸುಧಾ ನಾರಾಯಣಪ್ಪ ಜಯಮ್ಮ ಫ಼ಿಜಿಯೋಥೆರಪಿ ಪ್ರತಿಭಾ ಪುರಸ್ಕಾರ’ ಪಡೆಯಲು ತಮ್ಮ ಮುಂದೆ ನಿಂತಿರುವ ನನಗೆ ಮಾತನಾಡಲು ಆಗದಷ್ಟು ಸಂತೋಷವಾಗಿದೆ. ಇಂತಹ ಪುರಸ್ಕಾರ ನನಗೆ ಬರಲು ನನಗೆ ಜನ್ಮ ನೀಡಿ ಪ್ರೋತ್ಸಾಹಿಸಿದ ನನ್ನ ತಂದೆ, ತಾಯಿ ಮತ್ತು ಮಾರ್ಗದರ್ಶನ ಮಾಡಿದ ಅಧ್ಯಾಪಕವೃಂದವನ್ನು ಸ್ಮರಿಸಬೇಕಾಗಿದೆ. ವಿಶೇಷವಾಗಿ ಪ್ರಾಂಶುಪಾಲರಾದ ಪ್ರೊ. ಕೆ.ಎ. ಆನಂದಿಮೇಡಂ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ದೇವರಕೃಪೆಯಿಂದ ನನಗೆ ಇಂತಹ ಅವಕಾಶ ದೊರಕಿದೆ. ಜೊತೆಗೆ ನಾನು ವಹಿಸಿಕೊಂಡ ಕೆಲಸವನ್ನು ಶ್ರದ್ಧೆಯಿಂದ ಮಾಡುವ ಸ್ವಭಾವವನ್ನು ಬೆಳೆಸಿಕೊಂಡಿದ್ದೇನೆ. ವ್ಯಾಸಂಗವಾದರೂ ಆಗಬಹುದು, ಆಸ್ಪತ್ರೆಯಲ್ಲಿನ ಕೆಲಸವಾಗಬಹುದು ಒಮ್ಮೆ ಕೆಲಸದ ಸ್ಥಳಕ್ಕೆ ಹೋದರೆ ಎಲ್ಲವನ್ನು ಮರೆತು ಅದರಲ್ಲಿ ತಲ್ಲೀನನಾಗುತ್ತೇನೆ. ಫ಼ಿಜಿಯೋಥೆರಪಿ ಕೋರ್ಸ್‌ನ್ನು ನಾನೇ ಆಯ್ಕೆ ಮಾಡಿಕೊಂಡಿದ್ದೆ. ಈಗ ಅದರ ಮಹತ್ವ ಗೊತ್ತಾಗುತ್ತಿದೆ. ವ್ಯಕ್ತಿಯಿಂದ ಹಿಡಿದು ಸಮುದಾಯದ ತನಕ ಸೇವೆ ಮಾಡುವ ಅವಕಾಶ ಇಲ್ಲಿ ದೊರಕುತ್ತದೆ. ನೀವು ಇಂದು ವೃತ್ತಿಗೆ ಬರಲು ಫ಼ಿಜಿಯೋಥೆರಪಿಗೆ ಕೋರ್ಸ್‌ಗೆ ಸೇರಿರುವುದು ಉತ್ತಮವಾದ ಕೆಲಸ. ಅದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ನೀವು ನಾಲ್ಕು ವರ್ಷ ವ್ಯಾಸಂಗವನ್ನು ಶ್ರದ್ಧೆಯಿಂದ ಮಾಡಿದರೆ ಶೈಕ್ಷಣಿಕವಾಗಿ ಮೊದಲ ಸ್ಥಾನಕ್ಕೆ ಬರುತ್ತೀರಿ. ನಿಮಗೂ ಇಂತಹ ಪುರಸ್ಕಾರಗಳು ದೊರೆಯುತ್ತವೆ. ಉತ್ತಮ ಕೆಲಸದಿಂದ ನೀವು ಸಹ ಅಂತಹ ಪುರಸ್ಕಾರಗಳನ್ನು ಪಡೆದುಕೊಳ್ಳುವ ಹಾಗಾಗಲಿ ಎಂದು ಹಾರೈಸುತ್ತೇನೆ” ಎಂದರು.

## ಕು. ಸುಧಾ ನಾರಾಯಣಪ್ಪ ಜಯಮ್ಮರವರ ಪ್ರತಿಭಾ ಪುರಸ್ಕಾರ

**ಪ್ರಾಸ್ತಾವಿಕ ನುಡಿ: ಡಾ.ಎಂ.ಆರ್.ಹುಲಿನಾಯ್ಕರ್, ಅಧ್ಯಕ್ಷರು, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ**



'ನಮ್ಮ ಕಾಲೇಜಿಗೆ ಆಗಮಿಸಿರುವ ಪಿ.ಜಿ.ಆರ್. ಸಿಂಧ್ಯ ಅವರು ಕರ್ನಾಟಕದ ರಾಜಕಾರಣದಲ್ಲಿ ದೊಡ್ಡ ಸಾಧನೆ ಮಾಡಿರುವವರು. ತತ್ವನಿಷ್ಠರಾಜಕಾರಣದಲ್ಲಿ ನಂಬಿಕೆಯುಳ್ಳವರು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದವರು. ರಾಜಕಾರಣವನ್ನು ಜನತಾಪಕ್ಷದಿಂದ ಪ್ರಾರಂಭಿಸಿದ್ದರು. ಕನಕಪುರ ವಿಧಾನಸಭಾ ಕ್ಷೇತ್ರದಿಂದ 6 ಶಾಸಕರಾಗಿದ್ದ ಪಿ.ಜಿ.ಆರ್.ಸಿಂಧ್ಯ ಅವರು ದಕ್ಷ ಆಡಳಿತಗಾರರು ಎಂದು ಖ್ಯಾತಿಗಳಿಸಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ, ಸಮಾಜಕಲ್ಯಾಣ, ಗೃಹ, ಸಾರಿಗೆ ಕೈಗಾರಿಕೆ, ಹಣಕಾಸು ಹೀಗೆ ಹತ್ತು ಹಲವು ಖಾತೆಗಳನ್ನು ನಿರ್ವಹಿಸಿರುವ ಪಿ.ಜಿ.ಆರ್.ಸಿಂಧ್ಯ ಅವರು, ತಾವು ಅಧಿಕಾರ ನಡೆಸಿದ ಎಲ್ಲಾ ಕಡೆ ತಮ್ಮತನವನ್ನು ಸ್ಥಾಪಿಸಿದ್ದಾರೆ. ಎಸ್. ನಿಜಲಿಂಗಪ್ಪ, ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಬೊಮ್ಮಾಯಿ, ಜೆ.ಎಚ್.ಪಟೇಲ್, ದೇವೇಗೌಡ ಮೊದಲಾದ ರಾಜಕೀಯ ನಾಯಕರ ಜೊತೆ ಕೆಲಸ ಮಾಡಿದ ಹೆಗ್ಗಳಿಕೆ ಶ್ರೀ ಸಿಂಧ್ಯ ಅವರದು. ರಾಜಕಾರಣದ ನಂತರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದ್ಭುತ ಕೆಲಸ ಮಾಡುತ್ತಿದ್ದಾರೆ. ಅವರ ಕಾಯಕಮನೋಧರ್ಮಕ್ಕೆ ನಾವೆಲ್ಲಾ ಅವರನ್ನು ಅಭಿನಂದಿಸಬೇಕು.'

'ನಮ್ಮ ಕಾಲೇಜಿನಲ್ಲಿ ತಮ್ಮ ಮಗಳು ಕುಮಾರಿ ಸುಧಾ ಅವರ ಹೆಸರಿನಲ್ಲಿ ದತ್ತಿ ಸ್ಥಾಪಿಸಿರುವ ಡಾ.ಎನ್.ನಾರಾಯಣಪ್ಪ ದಂಪತಿಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಫಿಜಿಯೋಥೆರಪಿಸ್ಟ್ ನಾರಾಯಣಪ್ಪ ಅವರು ನಮ್ಮ ಕುಟುಂಬಕ್ಕೆ ಆಪ್ತರು. ಅವರು ನಾನು ತುಮಕೂರಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸರ್ಜನ್ ಆಗಿದ್ದಾಗ ಅಲ್ಲೇ ಫಿಜಿಯೋಥೆರಪಿಸ್ಟ್ ಆಗಿದ್ದರು. ಸುಮಾರು 19 ವರ್ಷ ಅವರು ಅಲ್ಲೇ ಫಿಜಿಯೋಥೆರಪಿ ವಿಭಾಗದಲ್ಲಿ ಕೆಲಸ ಮಾಡಿದ್ದಾರೆ ಒಟ್ಟು 33 ವರ್ಷ ಫಿಜಿಯೋಥೆರಪಿ ಕ್ಷೇತ್ರದಲ್ಲಿ ಕೆಲಸ ಮಾಡಿದ ಹಿರಿಮೆ ಅವರದು. ಜೊತೆಗೆ ನಿವೃತ್ತರಾದ ನಂತರ ಕಿಮ್ಸ್ ಮತ್ತು ಸಾಗರ್ ಆಸ್ಪತ್ರೆಗಳಲ್ಲಿ ಫಿಜಿಯೋಥೆರಪಿ ಇಲಾಖೆಯನ್ನು ಪ್ರಾರಂಭಿಸಿ ಅದಕ್ಕೆ ಸೂಕ್ತ ಪೋಷಣೆ ನೀಡಿದ್ದಾರೆ. ಅವರು ಕ್ಲಿನಿಕಲ್ ಮತ್ತು ಬೋಧನಾ ಎರಡು ವಿಭಾಗದಲ್ಲೂ ಅಸಾಧಾರಣ ಸೇವೆ ಸಲ್ಲಿಸಿದ್ದಾರೆ.

'ಅವರು ತಮ್ಮ ಮಗಳು ದಿವಂಗತ ಸುಧಾ ಅವರ ಹೆಸರಿನಲ್ಲಿ ಪ್ರತಿಭಾವಂತ ಮೂವರು ವಿದ್ಯಾರ್ಥಿಗಳಿಗೆ ಮತ್ತು ಇಬ್ಬರು ಸೇವಾ ಮನೋಭಾವವುಳ್ಳ ಫಿಜಿಯೋಥೆರಪಿಸ್ಟ್‌ಗಳಿಗೆ ಪ್ರತಿ ವರ್ಷ ಪುರಸ್ಕಾರ ನೀಡಲು ದತ್ತಿ ಸ್ಥಾಪಿಸಿರುವುದು ನನಗೆ ಸಂತೋಷ ತಂದಿದೆ. ಅದಕ್ಕಾಗಿ ಡಾ.ಎನ್.ನಾರಾಯಣಪ್ಪ ಮತ್ತು ಅವರ ಮಡದಿ ಜಯಮ್ಮ ಅವರನ್ನು ಅಭಿನಂದಿಸುತ್ತೇನೆ. ಕುಮಾರಿ ದಿವಂಗತ ಸುಧಾ ಅವರು ಅಸಾಧಾರಣ ಚಟುವಟಿಕೆಯುಳ್ಳ ವ್ಯಕ್ತಿಯಾಗಿದ್ದರು. ತಮ್ಮ ಅನಾರೋಗ್ಯದ ನಡುವೆ ಶೈಕ್ಷಣಿಕವಾಗಿ ಅನೇಕ ಪದವಿಗಳನ್ನು ಪಡೆದಿದ್ದರು. ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಿ ಅನೇಕರ ಏಳಿಗೆಗೆ ಕಾರಣಕರ್ತರಾಗಿದ್ದಾರೆ. ಅವರ ಹೆಸರಿನಲ್ಲಿರುವ ಈ ಪ್ರಶಸ್ತಿ ಪ್ರದಾನದ ಸಮಾರಂಭವನ್ನು ಪ್ರತಿವರ್ಷ ಮೇ 13ರಂದು ಅರ್ಥಪೂರ್ಣವಾಗಿ ಆಚರಿಸಲಾಗುವುದು.

## ಟಿಮೆಕ್ ಕಂಪನಿಗೆ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಭೇಟಿ



ತುಮಕೂರು ನಗರದ ಹೊರವಲಯದ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ಟಿಮೆಕ್ ಕಂಪನಿಗೆ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ, ವಿದ್ಯುತ್ ಹಾಗೂ ಯಾಂತ್ರಿಕ ವಿಭಾಗದ 4ನೆ ಸೆಮಿಸ್ಟರ್ ವಿದ್ಯಾರ್ಥಿಗಳು ಜೂನ್ 6ರಂದು ಭೇಟಿ ನೀಡಿದರು.

ಕಂಪನಿಯ ಇಂಡಸ್ಟ್ರಿಯಲ್ ರಿಲೇಶನ್ಸ್ ಮುಖ್ಯಸ್ಥರಾದಂತಹ ಎಚ್. ಎಸ್. ರಮೇಶ, ಪ್ರೊಡಕ್ಷನ್ಸ್ ಮುಖ್ಯಸ್ಥರಾದಂತಹ ಎಸ್.ಎಂ.ಆರ್ ಪ್ರಸಾದ, ಪ್ಲಾಂಟ್ ಮುಖ್ಯಸ್ಥರಾದಂತಹ ಜೆಂಗೆಟಕಾಓ, ಸ್ಪೆಷಲ್ ಪ್ರೊಜೆಕ್ಟ್ ಮುಖ್ಯಸ್ಥರಾದಂತಹ ಶಂಕರಪ್ರಸಾದ, ಆಪರೇಷನ್ಸ್ ಮುಖ್ಯಸ್ಥರಾದಂತಹ ಶೈಲೇಶ ಪುರಾಣಿಕ ಅವರೊಂದಿಗೆ ಶ್ರೀದೇವಿ ಕಾಲೇಜು ಪ್ರಾಧ್ಯಾಪಕ ನಿಯೋಗದವರು ಇಂಟರ್ನ್‌ಶಿಪ್, ಪ್ಲೇಸ್‌ಮೆಂಟ್ಸ್, ರಿಸರ್ಚ್, ಟ್ರೇನಿಂಗ್ ಬಗ್ಗೆ ಪರಸ್ಪರ ಒಡಂಬಡಿಕೆಗಾಗಿ ಔಪಚಾರಿಕವಾಗಿ ಚರ್ಚಿಸಿದರು.

ವಿದ್ಯುನ್ಮಾನ ವಿಭಾಗದ ಮುಖ್ಯಸ್ಥರಾದಂತಹ ಡಾ. ಷರೀಫ್, ಯಾಂತ್ರಿಕ ವಿಭಾಗದ ಮುಖ್ಯಸ್ಥರಾದಂತಹ ಪ್ರೊ.ಕೆ.ಪಿ.ಚಂದ್ರಯ್ಯ, ವಿದ್ಯುತ್ ವಿಭಾಗದ ಮುಖ್ಯಸ್ಥರಾದಂತಹ ಪ್ರೊ. ಜಿ.ಎಚ್. ರವಿಕುಮಾರ, ಪ್ರೊ. ಮಲ್ಲಿಕಾರ್ಜುನ ವೈ.ಪಿ, ಪ್ರೊ. ಸುಶ್ಮಿತಾ ವಿ.ಆರ್, ಐಐಐಸಿ ನಿರ್ದೇಶಕರಾದಂತಹ ಡಾ.ಭಾರ್ಗವ ಎಚ್. ಕೆ. ಅವರ ಮನವಿಗೆ ಕಂಪನಿಯ ಆಡಳಿತ ಮಂಡಳಿಯು ಸಕಾರಾತ್ಮಕವಾಗಿ ಸ್ಪಂದಿಸಿತು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಯಾದ ಅಂಬಿಕಾ ಎಂ. ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ಲಾವಣ್ಯ ಹುಲಿನಾಯ್ಕರ್, ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್ ಅವರುಗಳು ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದಕ್ಕೆ ಟಿಮೆಕ್ ಕಂಪನಿಯ ಆಡಳಿತ ಮಂಡಳಿಗೆ ಧನ್ಯವಾದ ತಿಳಿಸಿದರು. ಟಿಮೆಕ್ ಕಂಪನಿಯಲ್ಲಿ ಕಾರ್ಯನಿರ್ವಹಿಸುವ ಶ್ರೀದೇವಿ ಇಂಜನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಪ್ರಾಧ್ಯಾಪಕ ನಿಯೋಗವನ್ನು ಭೇಟಿ ಮಾಡಿದ್ದು ಭೇಟಿಯ ವಿಶೇಷವಾಗಿತ್ತು.

**■ ವರದಿ: ಡಾ.ಭಾರ್ಗವ ಎಚ್.ಕೆ.**

## ತೃಪ್ತಿ ಹಾಗು ಮಾನವೀಯತೆ ಜೀವನಕ್ಕೆ ಬೇಕಾದ ಎರಡು ಮೌಲ್ಯ: ನ್ಯಾ.ಸಂತೋಷ ಹೆಗಡೆ

◀◀ ...ಮೊದಲನೇ ಪುಟದಿಂದ

'ಸಮಾಜದ ಎಲ್ಲಾ ಸಮಸ್ಯೆಗಳಿಗೆ ದುರಾಸೆಯೇ ಮೂಲ. ಇದು ಅವನ ತಪ್ಪಲ್ಲ. ಸಮಾಜದ ತಪ್ಪು. ಇಂದು ನಮ್ಮ ಸಮಾಜದಲ್ಲಿ ಜೈಲಿಗೆ ಹೋಗಿ ಬಂದವರನ್ನು ದೂರವಿಡುವ ಬದಲು, ಹಾರ ಹಾಕಿ ಸನ್ಮಾನ ಮಾಡುತ್ತಿದ್ದೇವೆ. ಮಾರಕ ಕ್ಯಾನ್ಸರ್‌ಗೆ ಮದ್ದಿದೆ. ಅದರೆ ದುರಾಸೆಗೆ ಯಾವುದೇ ಮದ್ದಿಲ್ಲ.

'ಜೀವನದಲ್ಲಿ ಏನಾದರು ಆಗು, ಮೊದಲು ಮಾನವನಾಗು' ಎನ್ನುವ ಕವಿ ಮಾತು ಎಲ್ಲಾ ಕಾಲಕ್ಕೂ ಬೇಕು. ಮಾನವೀಯತೆಯಿಲ್ಲದ ಜೀವನ ಸಾರ್ಥಕವಾಗದು. ನಾನು ಸಹ ಕರ್ನಾಟಕದ ಲೋಕಾಯುಕ್ತ ಹುದ್ದೆಗೆ ಬರುವ ಮುನ್ನ ಕೂಪಮಂಡೂಕನಾಗಿದ್ದೆ. ಹುದ್ದೆಗೆ ಬಂದ ನಂತರವಷ್ಟೆ ಜನರ ಕಷ್ಟಕಾರ್ಪಣ್ಯಗಳು ತಿಳಿಯಿತು. ಮನುಷ್ಯರು ಎದುರಿಸುತ್ತಿರುವ ವಿವಿಧ ಸಮಸ್ಯೆ ತಿಳಿದವು. ಭ್ರಷ್ಟ ಅಧಿಕಾರಿಗಳ ವಿವಿಧ ಮುಖವಾಡಗಳು ಅನಾವರಣಗೊಂಡವು. ಸರ್ಕಾರಿ ನೌಕರರಲ್ಲಿ ಮಾನವಿಯತೆಯೇ ಇಲ್ಲವಾಗಿದೆ. ಇನ್ನೊಬ್ಬರ ನೋವಿಗೆ ಸ್ಪಂದಿಸುವ ಮನೋಭಾವವನ್ನು ಅವರು ಕಳೆದುಕೊಂಡಿದ್ದಾರೆ. ಯಾಂತ್ರಿಕ ಬದುಕು ಅವರಾಗಿದೆ. ಅದಕ್ಕಾಗಿ ಜನಸಾಮಾನ್ಯರು ಕಷ್ಟ ಅನುಭವಿಸುತ್ತಿದ್ದಾರೆ" ಎಂದರು.

**(ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಶ್ರಯದಲ್ಲಿ ಅಂಧ ಮಕ್ಕಳಿಗೆ ಶಸ್ತ್ರ ಚಿಕಿತ್ಸೆ ನೀಡುವ ಕಾರ್ಯಕ್ರಮದಲ್ಲಿ ಮಾಡಿದ ಭಾಷಣ.)**

## ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಜೊತೆ ಶ್ರೀದೇವಿ ಆಸ್ಪತ್ರೆಯ ಒಡಂಬಡಿಕೆ

"ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತವಾದ ರೋಗಿಗಳಿಗೆ ತಕ್ಷಣ ಉಚಿತ ಆರೋಗ್ಯಸೇವೆಯನ್ನು ಕಲ್ಪಿಸಲಾಗುವುದು. ಅವರಿಗೆ ಮೂವತ್ತು ಸಾವಿರ ರೂ.ಗಳಷ್ಟು ಮೊತ್ತವನ್ನು ವೈದ್ಯಕೀಯ ವೆಚ್ಚದಲ್ಲಿ ರಿಯಾಯಿತಿ ನೀಡುವುದು. ಅಗತ್ಯವಿದ್ದರೆ ಎಲ್ಲಾ ನೆರವನ್ನು ಪೂರ್ಣವಾಗಿ ಉಚಿತವಾಗಿ ಕಲ್ಪಿಸಲಾಗುವುದು" ಎಂದು ಶ್ರೀದೇವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಜೊತೆಗೆ ಶ್ರೀದೇವಿ ಆಸ್ಪತ್ರೆ ಒಡಂಬಡಿಕೆ ಮಾಡಿಕೊಂಡ ಸಂದರ್ಭದಲ್ಲಿ ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ, ಇಂಡಿಯಾ ಹೆಲ್ತ್ ಇನ್ಶೂರೆನ್ಸ್ ಪ್ರೈ.ಲಿಮಿಟೆಡ್ ಹಾಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಜೊತೆಗೆ ಜೂನ್ 6ರಂದು ಒಡಂಬಡಿಕೆ ನಡೆಯಿತು. ಮೂರು ಸಂಸ್ಥೆಗಳು ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ಆರೋಗ್ಯಸೇವೆ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಘೋಷಿಸಿದರು.



**ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಉಪ ಅಧೀಕ್ಷಕರಾದ ಡಾ.ಚೆನ್ನಮಲ್ಲಯ್ಯ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ತುಮಕೂರು ಜಿಲ್ಲಾ ಕೋ-ಅಡಿನೇಟರ್‌ರಾದ ಸಿ.ವಸಂತನಾಯ್ಕ, ನರರೋಗ ತಜ್ಞರಾದ ಡಾ.ಸಂಪತ್, ಆರ್ಥೋಪೆಡಿಕ್ ವಿಭಾಗದ ಮುಖ್ಯಸ್ಥರಾದ ಡಾ.ಎನ್.ಎಸ್.ಗುಡಿ, ಶಸ್ತ್ರಚಿಕಿತ್ಸಾ ಡಾ.ಅಮಿತ್, ಶ್ರೀದೇವಿ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಟಿ.ಜಿ.ದೀಪಕ್, ಮತ್ತು ಡಾ.ಈಶ್ವರಪ್ಪ.**

# ಅಂಧ ಮಕ್ಕಳ ಬಾಳಿಗೆ ಬೆಳಕಾದ ವಿವೇಕ ಕಿರಣ



■ ವರದಿ:
ಕೆ. ಎಸ್. ರಾಜಮನ್ನಾರ್




ಎಡಗಡೆಯಿಂದ ಡಾ ಇಂದ್ರಕಲಾ, ಡಾಕೀರ್ತಿ ಅಭಿಷೇಕ, ಡಾ.ಲಾವಣ್ಯ ರಮಣ, ಡಾ.ರಮಣ ಹುಲಿನಾಯ್ಕರ್, ಎಸ್ ನಾಗಣ್ಣ, ನ್ಯಾಯಮೂರ್ತಿ ಸಂತೋಷ ಹೆಗಡೆ, ಪೂಜ್ಯ ಶ್ರೀ ಜಪಾನಂದ ಮಹಾರಾಜ್, ಡಾ.ಎಂ.ಆರ್.ಹುಲಿನಾಯ್ಕರ್, ಪ್ರಶಾಂತ್, ಸುರೇಶ ಬಾಬು, ಶಾಂತವದನಂ, ಎಂ.ಎಸ್.ಪಾಟೀಲ್ ಹಾಗು ಡಾ.ಸುರೇಖ.

ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ದೃಷ್ಟಿದೋಷ ಸಮಸ್ಯೆ ಹೆಚ್ಚಾಗುತ್ತಿದೆ. ಇದಕ್ಕೆ ಹಲವಾರು ಕಾರಣಗಳಿವೆ ಎಂಬುದನ್ನು ವೈದ್ಯಲೋಕ ಹೇಳುತ್ತಿದೆ. ಕಾರಣಗಳು ಏನೇ ಇರಲಿ, ದೇಶದಲ್ಲಿ 33 ಲಕ್ಷ ಮಕ್ಕಳು ಒಂದಲ್ಲ ಒಂದು ದೃಷ್ಟಿದೋಷ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂಬುದು ಆತಂಕದ ವಿಷಯ.

'ಮಕ್ಕಳೇ ನಾಳಿನ ಪ್ರಜೆಗಳು ಮತ್ತು ದೇಶದ ಆಸ್ತಿ' ಎನ್ನುವ ಸನ್ನಿವೇಶದಲ್ಲಿ ದೇಶದ ಭವಿಷ್ಯವನ್ನು ರೂಪಿಸುವ ಮಕ್ಕಳು ಕತ್ತಲೆಯ ಕೂಪದಲ್ಲಿ ಬಳಲುವುದಾದರೆ, ನಾಳಿನ ದಿನಗಳನ್ನು ಕತ್ತಲಲ್ಲಿ ಕಳೆಯುವುದಾದರೆ ಮುಂದಿನ ಭವಿಷ್ಯ ಕಟ್ಟಿಕೊಡುವವರು ಯಾರು? ಯಾವುದಾದರೂ ಶಾಲೆಯ ಮುಂದೆ ಹತ್ತು ನಿಮಿಷ ನಿಂತು, ಮಕ್ಕಳ ಚಲನವಲನಗಳ ಮೇಲೆ ಕಣ್ಣಾಡಿಸಿದರೆ ಐದು ವರ್ಷ ದಾಟದ ಪುಟ್ಟ ಮಕ್ಕಳು ಕನ್ನಡಕ ಧರಿಸುವುದನ್ನು ಕಾಣುತ್ತೇವೆ. ಅದರಲ್ಲೂ 5 ರಿಂದ 15 ವರ್ಷದ ವಯಸ್ಸಿನ ಮಕ್ಕಳಲ್ಲಿ ಕಣ್ಣಿನ ಸಮಸ್ಯೆಗಳು ಹೆಚ್ಚಾಗುತ್ತಿರುವುದು ಕಂಡುಬರುತ್ತಿದೆ. ಇದರಲ್ಲಿ ಐದು ಲಕ್ಷ ಮಕ್ಕಳು ಕಣ್ಣಿನಪೊರೆ ಸಮಸ್ಯೆಯಿಂದಲೇ ಬಳಲುತ್ತಿದ್ದಾರೆ ಎಂಬುದನ್ನು ವೈದ್ಯಕೀಯ ಲೋಕದ ಅಂಕಿ ಅಂಶಗಳು ಹೇಳುತ್ತಿವೆ.

ಇದನ್ನು ಉಪೇಕ್ಷೆ ಮಾಡುವಂತಿಲ್ಲ. ಇದರಿಂದ ಹೊರಬರಲು ಸರ್ಕಾರ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳು, ಮತ್ತು ಸ್ವಯಂ ಸೇವಾಸಂಸ್ಥೆಗಳು ಜಂಟಿಯಾಗಿ ಕೆಲಸ ಮಾಡುವ, ಸರ್ಕಾರಕ್ಕೆ ಹೆಗಲು ಕೊಡುವ ಅಗತ್ಯವಿದೆ. ಮಕ್ಕಳಲ್ಲಿ ಉಂಟಾಗುತ್ತಿರುವ ದೃಷ್ಟಿದೋಷದ ಸಮಸ್ಯೆ ನಿವಾರಿಸಲು ಬೇಕಾದ ನುರಿತ ವೈದ್ಯರ ಕೊರತೆಯನ್ನೂ ದೇಶ ಎದುರಿಸುತ್ತಿದೆ ಎಂಬುದು ಮತ್ತೊಂದು ಆಘಾತಕಾರಿ ಸಂಗತಿ! ದೇಶದಲ್ಲಿ ಕೇವಲ 500 ಜನ ಪೀಡಿಯಾಟ್ರಿಕ್ ಐ ಸರ್ಜನ್ ಇದ್ದಾರೆ. ಈ ಲೆಕ್ಕದಲ್ಲಿ ನೋಡುವುದಾದರೆ 10 ಲಕ್ಷ ಮಕ್ಕಳಿಗೆ ಒಬ್ಬ ಪೀಡಿಯಾಟ್ರಿಕ್ ಐ ಸರ್ಜನ್ ಇದ್ದಾರೆ. ಸಮುದಾಯದ ಸಂಘಟಿತ ಪ್ರಯತ್ನದ ಜೊತೆಗೆ ಸರ್ಕಾರ ಮತ್ತು ಖಾಸಗಿ ವೈದ್ಯಕೀಯ ಕಾಲೇಜಿನ ಪರಿಶ್ರಮ ಮುಖ್ಯವಾಗಿದೆ. ಇಂತಹ ಮಾನವೀಯಸೇವೆ ಮತ್ತು ಮಕ್ಕಳ ನೇತ್ರಚಿಕಿತ್ಸೆಗೆ ಪಾವಗಡ ಶಾರದಾದೇವಿ ಕಣ್ಣಿನ ಆಸ್ಪತ್ರೆ ಹಾಗೂ ಸ್ವಾಮಿ ವಿವೇಕಾನಂದ ಗ್ರಾಮಾಂತರ ಆರೋಗ್ಯ ಕೇಂದ್ರ ಅಂಧ ಮಕ್ಕಳ ಬಾಳಿನಲ್ಲಿ ಹೊಸ ಭರವಸೆ ಮೂಡಿಸಲು ಅನುಷ್ಠಾನ ಮಾಡುತ್ತಿರುವ 'ವಿವೇಕ ಕಿರಣ' ಕಾರ್ಯಕ್ರಮಕ್ಕೆ ಶ್ರೀದೇವಿ ಮೆಡಿಕಲ್ ಕಾಲೇಜು ಕೈ ಜೋಡಿಸಿದೆ.

**ದೇಶದಲ್ಲಿ ಕೇವಲ 500 ಜನ ಪೀಡಿಯಾಟ್ರಿಕ್ ಐ ಸರ್ಜನ್ ಇದ್ದಾರೆ. ಈ ಲೆಕ್ಕದಲ್ಲಿ ನೋಡುವುದಾದರೆ 10 ಲಕ್ಷ ಮಕ್ಕಳಿಗೆ ಒಬ್ಬ ಪೀಡಿಯಾಟ್ರಿಕ್ ಐ ಸರ್ಜನ್ ಇದ್ದಾರೆ. ಸಮುದಾಯದ ಸಂಘಟಿತ ಪ್ರಯತ್ನದ ಜೊತೆಗೆ ಸರ್ಕಾರ ಮತ್ತು ಖಾಸಗಿ ವೈದ್ಯಕೀಯ ಕಾಲೇಜಿನ ಪರಿಶ್ರಮ ಮುಖ್ಯವಾಗಿದೆ.**

ಪಾವಗಡ ತಾಲ್ಲೂಕು ಮತ್ತು ಆಂಧ್ರ ಗಡಿಭಾಗದ 500ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಶ್ರವಣ ಮತ್ತು ಕಣ್ಣಿನ ದೋಷ ನಿವಾರಿಸಿ ಕನ್ನಡಕ ನೀಡುವಂತಹ ಮಾನವೀಯ ಸೇವೆಯನ್ನು ಶ್ರೀ ಜಪಾನಂದ ಸ್ವಾಮಿಗಳು ಮಾಡುತ್ತಿದ್ದಾರೆ. ಈ ಕಾರ್ಯಕ್ರಮಕ್ಕೆ ನ್ಯಾಯಮೂರ್ತಿ, ಕರ್ನಾಟಕದ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗಡೆ ಚಾಲನೆ ನೀಡಿದರು. ಮಕ್ಕಳ ಅಂಧತ್ವ ನಿವಾರಣಾ ಕಾರ್ಯಕ್ರಮಕ್ಕೆ ಬೆಂಗಳೂರಿನ ನಿಯೋನಿಕ್ ಐ ಕೇರ್ ಟ್ರಸ್ಟ್ ಹೆಗಲುಕೊಟ್ಟಿವೆ.

### ಪಾವಗಡದ ಶ್ರೀಜಪಾನಂದ ಸ್ವಾಮೀಜಿ ಹೇಳಿದ್ದೇನು?

ಪಾವಗಡದ ಶ್ರೀರಾಮಕೃಷ್ಣ ಸೇವಾಶ್ರಮದ ಶ್ರೀಸ್ವಾಮಿ ಜಪಾನಂದ ಮಹಾರಾಜ್ ಅವರು "ನಾನು ಆರೋಗ್ಯ ಇಲಾಖೆಯ ಕಾರ್ಯಪಡೆಯ ಸದಸ್ಯನಾಗಿ ಸರ್ಕಾರಿ ವೈದ್ಯರ ಕಾರ್ಯವೈಖರಿಯನ್ನು ಹತ್ತಿರದಿಂದ ಕಂಡಿದ್ದೇನೆ. ಸರ್ಕಾರದಿಂದ ಉಚಿತವಾಗಿ ಸ್ನಾತಕೋತ್ತರ ಸೀಟ್ ಪಡೆದು ಪಿ.ಜಿ. ಮುಗಿಸಿದವರು, ಗ್ರಾಮೀಣಸೇವೆಗೆ ಬರದಿರಲು ಯಾವ ತಂತ್ರ–ಮಸಲತ್ತು ಮಾಡುತ್ತಾರೆ ಎಂಬುದನ್ನು ಹತ್ತಿರದಿಂದ ನೋಡಿದ್ದೇನೆ.

'ವೈದ್ಯರು ದೇಶದ ಆಸ್ತಿ ಎಂದು ನಂಬಿಕೊಂಡಿರುವವರು ನಾವು. ಆರೋಗ್ಯ ಸಮಾಜ ನಿರ್ಮಾಣ ಮಾಡುವಲ್ಲಿ ಅವರ ಪಾತ್ರ ತುಂಬಾ ಮಹತ್ವದದ್ದು. ಸಮಾಜಕ್ಕೆ ನಾವೇನು ಕೊಟ್ಟು ಹೋಗುತ್ತೇವೆ ಎಂಬುದರ ಕಡೆಗೂ ಲಕ್ಷವಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮಾನವೀಯತೆ ಮೈಗೂಡಿಸಿಕೊಳ್ಳಬೇಕು. ಬಹುತೇಕ ವೈದ್ಯರು ಹಳ್ಳಿಗಾಡಿನಲ್ಲಿ ಸೇವೆ ಸಲ್ಲಿಸಲು ಮನಸ್ಸು ಮಾಡುತ್ತಿಲ್ಲ. ಇದೊಂದು ಬೇಸರದ ಸಂಗತಿ.

'ಪಾವಗಡಕ್ಕೆ ಬನ್ನಿ ಎಂದು ಕೇಳಿದರೆ ಡೈರಿ ನೋಡಿ ನಂತರ ಹೇಳುತ್ತೇವೆ ಎನ್ನುತ್ತಾರೆ. ಮತ್ತೆ ಕೆಲವರು ಬರುವುದಾಗಿ ಹೇಳಿ ತುಮಕೂರು ದಾಟುವ ಮೊದಲೇ ಇನ್ನು ಎಷ್ಟು ದೂರವಿದೆ ಎಂದು ಪ್ರಶ್ನೆ ಕೇಳುತ್ತಾರೆ. ಪಾವಗಡ ಬೆಂಗಳೂರಿನಿಂದ ಕೇವಲ 180 ಕಿಲೋಮೀಟರ್ ದೂರದಲ್ಲಿದೆ. ಅದು ಅಮೆರಿಕ – ಜರ್ಮನಿಯಲ್ಲಿ ಇಲ್ಲ!! ಪಾವಗಡಕ್ಕೆ ಬರುವ ಮೊದಲೇ ಅವರು ಹಿಂದೆ ಹೋಗಲು ಯೋಚಿಸಿರುತ್ತಾರೆ. ಹೀಗಾದರೆ ಹಳ್ಳಿಗಾಡಿನ ಜನರ ಸಂಕಟ ಮತ್ತು ಆರೋಗ್ಯದ ಸಮಸ್ಯೆಯನ್ನು ಕೇಳುವವರು ಮತ್ತು ನೋಡುವವರು ಯಾರು? ಅವರು ಮನುಷ್ಯರಲ್ಲವೇ? ಇಂದು ಲಕ್ಷಾಂತರ ಮಕ್ಕಳು ತಮ್ಮದಲ್ಲದ ತಪ್ಪಿಗಾಗಿ ಕತ್ತಲೆ ಕೋಣೆಯಲ್ಲಿ ಬದುಕಬೇಕಾಗಿದೆ. ಅಂತಹವರ ಬಾಳಿನಲ್ಲಿ ನೇತ್ರವೈದ್ಯರು ಬೆಳಕು ಮೂಡಿಸಬೇಕು. ಬೇರೆಯವರು ನಿಮ್ಮನ್ನು, ಕಾಡುವ– ಬೇಡುವ ಮೊದಲೇ ನೀವು ಸಮಾಜದ ಋಣ ತೀರಿಸಿ, ನಿಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳುವುದು ಉತ್ತಮ.

'ಪಾವಗಡದ ಗ್ರಾಮೀಣ ಭಾಗದಲ್ಲಿದ್ದ ಪ್ರೌಢಶಾಲೆಯೊಂದರಲ್ಲಿ 8ನೆಯ ತರಗತಿ ವ್ಯಾಸಂಗ ಮಾಡುತ್ತಿದ್ದ ದೃಷ್ಟಿದೋಷವುಳ್ಳ ಸುಜಾತ ಎಂಬ ವಿದ್ಯಾರ್ಥಿನಿಗೆ ಬೆಳಕು ಕೊಡಲು ತಾವು ಮಾಡಿದ ಪ್ರಯತ್ನ ಕೇಳಿದರೆ ತಾವು ಆಶ್ಚರ್ಯಪಡುತ್ತೀರಾ. ದೃಷ್ಟಿದೋಷವುಳ್ಳ ಆ ಹುಡುಗಿಯನ್ನು ಶಾಲೆಬಿಡಿಸಿ ಎಮ್ಮೆ ಮೇಯಿಸಿಕೊಂಡು ಬರಲು ಕಳುಹಿಸಿದ್ದರು. ಮುಂದೆ ಆಕೆ ಭಿಕ್ಷೆ ಬೇಡಿ ಜೀವನ ಮಾಡಬೇಕಾಗಿತ್ತು. ಕತ್ತಲೆಯಲ್ಲಿ ಕಾಲ ಕಳೆಯುತ್ತಿದ್ದ ಸುಜಾತ ಹುಡುಗಿಗೆ ನನ್ನ ಮತ್ತು ವೈದ್ಯರ ಪ್ರಯತ್ನದಿಂದಾಗಿ ಕಣ್ಣು ಬಂತು. ಆಕೆ ವಿದ್ಯಾಭ್ಯಾಸ ಮುಂದುವರಿಸಿ ವಿದ್ಯಾವಂತಳಾದಳು.

'ದೇಶಾದ್ಯಂತ ಸುಜಾತಳಂತಹ ಅದೆಷ್ಟು ಲಕ್ಷಾಂತರ ಮಕ್ಕಳು ಇದ್ದಾರೋ ಗೊತ್ತಿಲ್ಲ. ಅಂತಹವರಿಗೆ ನಿಮ್ಮಂತಹ ವೈದ್ಯರು ಬೆಳಕು ತೋರಿಸಬೇಕು. ಸಾಮಾಜಿಕ ಮೌಲ್ಯಗಳು ಇಂದು ಸಂಪೂರ್ಣ ಬದಲಾಗಿದೆ. ವಿವೇಕಾನಂದರ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಬೇಕಾದ ಯುವಜನಾಂಗ ಚಿತ್ರನಟರ ಭಾವಚಿತ್ರ ಮತ್ತು ಕಟೌಟ್‌ಗಳಿಗೆ ಹಾಲುಯೆರೆಯುತ್ತಾರೆ. ಅವರ ಪಾಲಿಗೆ ಚಿತ್ರನಟರೇ ಆದರ್ಶವಾಗುತ್ತಾರೆ. ಇದಕ್ಕೆಲ್ಲ ಕಾರಣ ನೈತಿಕ ಶಿಕ್ಷಣ– ನೈತಿಕ ಪಾಠ ಮರೆಯುತ್ತಿರುವುದೇ ಆಗಿದೆ" ಎಂದರು.

### ಡಾ.ಎಂ.ಆರ್.ಹುಲಿನಾಯ್ಕರ್ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು

"ಗ್ರಾಮೀಣ ಭಾಗದ ಮಕ್ಕಳಲ್ಲಿನ ಕಣ್ಣಿನಪೊರೆ ನಿವಾರಿಸುವ ಜವಾಬ್ದಾರಿಯನ್ನು ಶ್ರೀದೇವಿ ಆಸ್ಪತ್ರೆ ತೆಗೆದುಕೊಂಡಿದೆ. ಸಂಸ್ಥೆಯಲ್ಲಿ ನುರಿತ ನೇತ್ರ ಶಸ್ತ್ರತಜ್ಞರು ಹಾಗೂ ತರಬೇತಿ ಪಡೆದ ಪ್ಯಾರಾ ಮೆಡಿಕಲ್ ಸಿಬ್ಬಂದಿ ಹಾಗೂ ಶಸ್ತ್ರಚಿಕಿತ್ಸೆಗೆ ಬೇಕಾದ ಸೌಲಭ್ಯಗಳು ಒಂದೇ ಸೂರಿನಡಿ ದೊರೆಯುತ್ತವೆ. ಪಾವಗಡದಂತಹ ಗಡಿಪ್ರದೇಶದಲ್ಲಿ ಕಳೆದ ನಲವತ್ತು ವರ್ಷಗಳಿಂದಲೂ ನೊಂದವರ ಸೇವೆಯಲ್ಲಿ ತೊಡಗಿರುವ ಪಾವಗಡದ ಜಪಾನಂದ ಸ್ವಾಮೀಜಿ ಅವರೊಂದಿಗೆ ಕೈಜೋಡಿಸಿ ಕಣ್ಣಿನ ದೋಷ ಮತ್ತು ಶ್ರವಣದೋಷವಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡಲು ಶ್ರೀದೇವಿ ವೈದ್ಯಕೀಯ ಸಂಸ್ಥೆ ಸಿದ್ಧವಿದೆ. ಬೇರೆಯವರ ಕಷ್ಟಗಳನ್ನು ಅರ್ಥಮಾಡಿಕೊಂಡಾಗ ನಮಗೆ ಮಾನವೀಯತೆಯ ಅರ್ಥ ತಿಳಿಯುತ್ತದೆ" ಎಂದರು.

### ಇನ್ನುಷ್ಟ ವಿವರ

ಮುಖ್ಯ ಅತಿಥಿಯಾಗಿದ್ದ 'ಪ್ರಜಾಪ್ರಗತಿ' ಪತ್ರಿಕೆಯ ಸಂಪಾದಕರಾದ ಎಸ್.ನಾಗಣ್ಣ ಅವರು 'ಪಾವಗಡದ ಶ್ರೀ ಜಪಾನಂದ ಸ್ವಾಮೀಜಿ ಅವರು ಪದವಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಬಿಸಿಯೂಟ ನೀಡಿ ದಾಖಲೆ ಬರೆದಿದ್ದಾರೆ. ಅವರು ಭಾಷಣ ಅಥವಾ ಆಶೀರ್ವಾದ ಮಾಡುವ ಸ್ವಾಮೀಜಿಯಲ್ಲ. ಸೇವೆ ಮಾಡುವ ಅಪರೂಪದ ಸ್ವಾಮೀಜಿ. ಇನ್ನು ಡಾ.ಎಂ. ಆರ್.ಹುಲಿನಾಯ್ಕರ್ ಅವರು ಸೇವೆಯಿಂದಲೇ ಎಲ್ಲೆಡೆ ಪ್ರಸಿದ್ಧಿಯಾಗಿದ್ದಾರೆ. ಇವರಿಬ್ಬರೂ ಸೇರಿ ಮಾಡುತ್ತಿರುವ ಮಕ್ಕಳ ದೃಷ್ಟಿದೋಷ ಪರಿಹಾರ ಕಾರ್ಯಕ್ರಮ ಅದ್ಭುತ ಯಶಸ್ಸು ಕಾಣುವುದರಲ್ಲಿ ಸಂಶಯವಿಲ್ಲ" ಎಂದರು.

ಜೂನ್ 12ರಂದು ಶ್ರೀದೇವಿ ವೈದ್ಯಕೀಯ ಕಾಲೇಜು, ಪಾವಗಡದ ಶ್ರೀಶಾರದದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಹಾಗೂ ಸ್ವಾಮಿವಿವೇಕಾನಂದ ಸಂಯುಕ್ತ ಗ್ರಾಮೀಣ ಆರೋಗ್ಯ ಕೇಂದ್ರ, ಬೆಂಗಳೂರಿನ ನಿಯೋನಿಕ ಐ ಕೇರ್ ಚಾರಿಟಬಲ್ ಟ್ರಸ್ಟ್, ಡಾ.ಎಸ್.ಆರ್. ಚಂದ್ರಶೇಖರ್ ವಾಕ್ ಮತ್ತು ಶ್ರವಣ ಕೇಂದ್ರ ಬೆಂಗಳೂರು ಹಾಗೂ ತುಮಕೂರಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಅವರ ಸಂಯುಕ್ತ ಆಶ್ರಯಲ್ಲಿ ಆಶಕ್ತರಿಗೆ ಅಂಧ ಮಕ್ಕಳಿಗೆ ಬೆಳಕು ನೀಡುವ ಹೃದಯಸ್ಪರ್ಶಿ ಸಮಾರಂಭ ಕಾರ್ಯಕ್ರಮ ವ್ಯವಸ್ಥೆಯಾಗಿತ್ತು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕ ಡಾ. ರಮಣ ಹುಲಿನಾಯ್ಕರ್, ಹೆಸರಾಂತ ನೇತ್ರತಜ್ಞೆ ಡಾ. ಲಾವಣ್ಯ ರಮಣ, ಎಚ್.ಆರ್. ನಿರ್ದೇಶಕ ಎಂ. ಎಸ್. ಪಾಟೀಲ್, ಬೆಂಗಳೂರಿನ ಡಾ ಎಸ್.ಆರ್. ಚಂದ್ರಶೇಖರ್, ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಯ ಕಾರ್ಯದರ್ಶಿ ಸುರೇಶ್ ಬಾಬು, ಖಜಾಂಚಿ ಶಾಂತವದನಂ, ಪಾವಗಡದ ಶ್ರೀಶಾರದ ಕಣ್ಣಿನ ಆಸ್ಪತ್ರೆಯ ಡಾ. ಅಭಿಷೇಕ್ ಮತ್ತು ಡಾ.ಕೀರ್ತಿ ಅಭಿಷೇಕ, ನಯೋನಿಕ ಐ ಕೇರ್ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಎಸ್. ಬಿ. ಪ್ರಶಾಂತ್, ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಡಾ.ತಿಮ್ಮೇಗೌಡ ಮೊದಲಾದವರು ಭಾಗಿಯಾಗಿದ್ದರು.




ಬೆಂಗಳೂರಿನ ನಯೋನಿಕಾ ಐ ಕೇರ್ ಸಂಸ್ಥೆಯವರು ಶಸ್ತ್ರಚಿಕಿತ್ಸೆಗೊಳಗಾದ ಮಕ್ಕಳಿಗೆ ಉಚಿತವಾಗಿ ಕನ್ನಡಕಗಳನ್ನು ನೀಡಿದರು. ಎಡಗಡೆಯಿಂದ ಪುಷ್ಪಲತಾ, ಯಮುನಾ, ಬಸವರಾಜು, ತೇಜ್ವವಿ, ಲಕ್ಷ್ಮಿ, ಕೋಮಲ, ಹರಿಣಿ, ಚೇತನ್, ಸಂದೀಪ್, ಸವೀತಾ, ಪುನಿತ್.ವಿ, ಮತ್ತು ಹೆಚ್.ಕೆ.ಅದಿತ್ಯ.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**